೬

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 589 |
| 2 | ಸದಸ್ಯರ ಹೆಸರು | ಶ್ರೀ. ಕೆ. ಹರೀಶ್ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸಬೇಕಾದ ಸಚಿವರು | ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು |
| 4 | ಉತ್ತರಿಸ ಬೇಕಾದ ದಿನಾಂಕ | 23-12-2022 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರಿನಲ್ಲಿ ಐತಿಹಾಸಿಕ ಲಾಲ್ ಬಾಗ್ ಉದ್ಯಾನವನದ ಸಮಸ್ಯೆಗಳ ಕುರಿತು ಸಾರ್ವಜನಿಕರಲ್ಲಿ ಚರ್ಚೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಹೌದು |
| ಆ | ಬಂದಿದಲ್ಲಿ, ಲಾಲ್ ಬಾಗ್ ಉದ್ಯಾನವನದ ಗೌರವಕ್ಕೆ ಧಕ್ಕೆಯಾಗುತ್ತಿರುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ? | ಲಾಲ್ ಬಾಗ್ ನ ಅಭಿವೃದ್ಧಿ ಮತ್ತು ನಿರ್ವಹಣೆಗೆ ಸಂಬಂಧಿಸಿದಂತೆ ಕೈಗೊಂಡಿರುವ ಕ್ರಮಗಳ ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ. |

**HORTI 599 HGM 2022**

(ಮುನಿರತ್ನ)
ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ
ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

LCQ 589

# ಅನುಬಂಧ-1

## ಲಾಲ್ ಬಾಗ್ ಸಸ್ಯಶಾಸ್ತ್ರೀಯ ತೋಟದ ಉತ್ತಮ ನಿರ್ವಹಣೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದಂತೆ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

| ಕ್ರ.ಸಂ | ಅಭಿವೃದ್ಧಿ/ನಿರ್ವಹಣಾ ಕಾರ್ಯಗಳು | ಕೈಗೊಂಡಿರುವ ಕ್ರಮಗಳು |
|---|---|---|
| 1 | ಸ್ವಚ್ಛತಾ ಕಾರ್ಯ | ಲಾಲ್ ಬಾಗ್ 240 ಎಕರೆಯಲ್ಲಿ ಹರಡಿರುವ ಬೃಹತ್ ಸಸ್ಯಕಾಶಿ, ದಿನವಹಿ ಮುಂಜಾನೆ 10,000ಕ್ಕೂ ಹೆಚ್ಚು ಸಂಖ್ಯೆಯ ಮತ್ತು ಸಂಜೆ 3,000 ಕ್ಕೂ ಹೆಚ್ಚು ಸಂಖ್ಯೆಯ ವಾಯುವಿಹಾರಿಗಳೂ ಹಾಗೂ ಸರಾಸರಿ 3-4 ಸಾವಿರ ಪ್ರವಾಸಿಗರು, ರಜಾ ದಿವಸಗಳಲ್ಲಿ ಈ ಸಂಖ್ಯೆ 12-13 ಸಾವಿರದ ಗಡಿದಾಟುತ್ತದೆ. ಫಲಪುಷ್ಪ ಪ್ರದರ್ಶನದ ಅವಧಿಯಲ್ಲಿ ಈ ಸಂಖ್ಯೆ ಲಕ್ಷದ ಗಡಿ ದಾಟುತ್ತದೆ. ಇಷ್ಟು ಜನರನ್ನು ಸೆಳೆಯುವ ಲಾಲ್ ಬಾಗ್ ನಲ್ಲಿ ಸ್ವಚ್ಛತೆ / ನೈರ್ಮಲ್ಯತೆಯನ್ನು ಕಾಪಾಡಲು ಇಲಾಖೆಯು ಕೈಗೊಂಡಿರುವ ಕ್ರಮಗಳು ಇಂತಿವೆ.<br>1. ಮೊದಲಿನಿಂದಲೂ ಇಲಾಖೆಯು ಆಯ್ದ ಮಾಲಿಗಳಿಂದಲೇ ಸಣ್ಣ ಪ್ರಮಾಣದ ಸ್ವಚ್ಛತಾ ಕಾರ್ಯಗಳನ್ನು ಮಾತ್ರ ಕೈಗೊಳ್ಳಲಾಗುತ್ತಿತ್ತು.<br>2. 1999-2000ರ ಅವಧಿಯಿಂದ ಹೊರಗುತ್ತಿಗೆ ಆಧಾರದ ಮೇಲೆ 8-10 ಜನ ಸ್ವಚ್ಛತಾ ಸಿಬ್ಬಂದಿ ಸೇವೆ ಪಡೆದು ಸ್ವಚ್ಛತಾ ಕಾರ್ಯವನ್ನು ಕೈಗೊಳ್ಳಲು ಪ್ರಾರಂಭಿಸಲಾಯಿತು.<br>3. 2008-09 ರ ಅವಧಿಯಿಂದ ಸ್ವಚ್ಛತಾ ಸಿಬ್ಬಂದಿಗಳ ಸಂಖ್ಯೆಯನ್ನು 20-25ಕ್ಕೆ ಹೆಚ್ಚಿಸಲಾಯಿತು.<br>4. 2017-18 ರ ಅವಧಿಯ ನಂತರ 50 ಜನ ಸ್ವಚ್ಛತಾ ಸಿಬ್ಬಂದಿಗಳ ಸೇವೆಯನ್ನು ಪಡೆಯಲಾಗುತ್ತಿದೆ.<br>5. ಹಿಂದೆ ಲಾಲ್ ಬಾಗ್ ನಿರ್ವಹಣೆಗೆ ಇದ್ದ ಒಟ್ಟು 250ಕ್ಕೂ ಹೆಚ್ಚು ಇಲಾಖಾ ಮಾಲಿಗಳ ಸಂಖ್ಯೆ ಇಂದು 45ಕ್ಕೆ ಇಳಿದಿದೆ. ಇದು ಲಾಲ್ ಬಾಗ್ ನ ಸಮರ್ಪಕ ನಿರ್ವಹಣೆಗೆ ಧಕ್ಕೆಯಾಗಿದೆ.<br>6. ಅದೇ ರೀತಿ ಹಿಂದೆ ಲಾಲ್ ಬಾಗ್ ನಲ್ಲಿ ಕೇವಲ 45 ಸಂಖ್ಯೆಯ ಡಸ್ಟ್ ಬಿನ್ಸ್ ಗಳಿದ್ದು ಇಂದು 350 ಕ್ಕೂ ಹೆಚ್ಚು ಡಸ್ಟ್ ಬಿನ್ಸ್ ಗಳನ್ನು ಸಸ್ಯತೋಟದ ಆಯ್ದ ಭಾಗಗಳಲ್ಲಿ ಅಳವಡಿಸಲಾಗಿದೆ. ಕೆಲವು ಕಡೆ wet and dry ಡಸ್ಟ್ |

ಬಿನ್ಸ್ ಗಳನ್ನು ಸಹಾ ಅಳವಡಿಸಲಾಗಿದೆ.

7. ಇಂದು ಪರಿಣಾಮಕಾರಿ ಸ್ವಚ್ಛತಾ ಕಾರ್ಯವನ್ನು ಕೈಗೊಳ್ಳಲು ಅನುವಾಗುವಂತೆ ಸಹಾಸ್, BOSH ಸಂಸ್ಥೆಗಳ ಪರಿಣಿತರು ಮತ್ತು ಸ್ವಚ್ಛತಾ ಕಾರ್ಯದಲ್ಲಿ ಪರಿಣಿತರಾದ ಶ್ರೀ ರಮಾಕಾಂತ್ ಹಾಗೂ ಹಲವು ಸಂಘ ಸಂಸ್ಥೆಗಳ ಪರಿಣಿತರನ್ನೊಳಗೊಂಡ ಸಭೆಗಳು ಮತ್ತು ಪ್ರಾತ್ಯಕ್ಷತೆಗಳನ್ನು ಕೈಗೊಂಡು ಅವರ ಸಲಹೆಗಳನ್ನಾಧರಿಸಿ ಸ್ವಚ್ಛತಾ ಕಾರ್ಯಕ್ಕೆ ಅನುವಾಗುವಂತಹ ಎಲ್ಲಾ ಪರಿಣಾಮಕಾರಿ ಕ್ರಮಗಳನ್ನು ಅನುಸರಿಸಲಾಗುತ್ತಿದೆ.
8. BOSH ಸಂಸ್ಥೆಯು 2020 ರಲ್ಲಿ CSR ಅನುದಾನದಡಿ 175 ಡಸ್ಟ್ ಬಿನ್ಸ್ ಗಳನ್ನು ಹೊಸದಾಗಿ ಒದಗಿಸಿದೆ. ಹಾಗೆಯೇ 4 ಜನ ಪರಿಣಿತ ಸ್ವಚ್ಛತಾ ಸಲಹೆಗಾರರ ಸೇವೆಯನ್ನು ಸಹಾ ಸತತವಾಗಿ 3 ವರ್ಷಗಳ ಕಾಲ ಒದಗಿಸುವ ಮುಖೇನ ಲಾಲ್ ಬಾಗ್ ನ ಸ್ವಚ್ಛತಾ ಸಿಬ್ಬಂದಿಗಳಿಗೆ ದೀರ್ಘಕಾಲದ ಪ್ರಾಯೋಗಿಕ ತರಭೇತಿಯನ್ನು ನೀಡಿ ಸಹಕರಿಸಿದ್ದಾರೆ.
9. ದಿನವಹಿ ಒಂದು ಸ್ವಚ್ಛತಾ ತಂಡ ರಸ್ತೆಗಳು ಹಾಗೂ ಪ್ರಮುಖ ಸ್ಥಳಗಳನ್ನು ಸ್ವಚ್ಛಗೊಳಿಸಿದರೆ, ಮತ್ತೆರಡು ತಂಡಗಳು ಸಸ್ಯತೋಟವನ್ನು ವಿವಿಧ ಭಾಗಗಳಿಗೆ ವಿಭಾಗಿಸಿಕೊಂಡು ಅಲ್ಲಿ ಕತ್ತರಿಸಿದ ಹುಲ್ಲು, ಒಣ ಎಲೆಗಳು ಮತ್ತು ರೆಂಬೆ-ಕೊಂಬೆಗಳ ತೆರವು ಮತ್ತು ಸ್ವಚ್ಛತೆಯನ್ನು ಕೈಗೊಳ್ಳುತ್ತಿದ್ದಾರೆ. ನಾಲ್ಕನೇ ತಂಡವು ಡಸ್ಟ್ ಬಿನ್ಸ್ ಗಳಲ್ಲಿನ ಕಸದ ಸಂಗ್ರಹ ಮತ್ತು ವಿಲೇವಾರಿ ಕಾರ್ಯವನ್ನು ಕೈಗೊಳ್ಳುತ್ತಿದ್ದಾರೆ. ಇದಕ್ಕಾಗಿ ಒಂದು ಟ್ರಾಕ್ಟರ್, 2 ಟಿಪ್ಪರ್ಸ್ ಗಳು, 1 ಕಾಂಪ್ಯಾಕ್ಟರ್ ಮತ್ತು ಒಬ್ಬರು ಮೇಲ್ವಿಚಾರಕರಿದ್ದಾರೆ.
10. ಸಸ್ಯತೋಟದಲ್ಲಿ ಸಂಗ್ರಹಗೊಳ್ಳುವ ಸಾವಯವ ತ್ಯಾಜ್ಯವನ್ನು (ಎಲೆ, ಕತ್ತರಿಸಿದ ಹುಲ್ಲು, ಸಣ್ಣ ರೆಂಬೆಗಳು ಇತ್ಯಾದಿ) ಲಾಲ್ ಬಾಗ್ ನ ಜಿಂಕೆ ನರ್ಸರಿ ಮತ್ತು ಬಂಡೆ ಹಿಂಭಾಗದ ಪ್ರದೇಶದಲ್ಲಿ ಕಾಂಪೋಸ್ಟ್ ತಯಾರಿಕೆಗೆ ಬಳಸಲಾಗುತ್ತಿದೆ. ಹೆಚ್ಚುವರಿಯಾದ ಸಾವಯವ ತ್ಯಾಜ್ಯವನ್ನು ಇಲಾಖೆಯ ಒಡೆತನದಲ್ಲಿರುವ ಹುಳಿಮಾವು ಜೈವಿಕ ಕೇಂದ್ರಕ್ಕೆ ಸಾಗಿಸಿ, ಕಾಂಪೋಸ್ಟ್ ಮತ್ತು ವರ್ಮಿಕಾಂಪೋಸ್ಟ್ ತಯಾರಿಕೆಗೆ ಬಳಸಲಾಗುತ್ತಿದೆ. ಲಾಲ್ ಬಾಗ್ ನಲ್ಲಿ ವಾರ್ಷಿಕ 25 ಟನ್ ಗಳಷ್ಟು ಕಾಂಪೋಸ್ಟ್ ಅನ್ನು ಉತ್ಪಾದಿಸಿ ಬಳಸಲಾಗುತ್ತಿದೆ.

11. ಲಾಲ್ ಬಾಗ್ ನಲ್ಲಿ ಸಂಗ್ರಹಿಸಲ್ಪಡುವ ಇತರೇ ತ್ಯಾಜ್ಯವನ್ನು ಗುತ್ತಿಗೆದಾರರು ವಾರಕ್ಕೆ 2-3 ಬಾರಿ ಕಾಂಪ್ಯಾಕ್ಟರ್ ಮುಖೇನ ಲಾಲ್ ಬಾಗ್ ನ ಹೊರಸಾಗಿಸುತ್ತಾರೆ.
12. ಲಾಲ್ ಬಾಗ್ ಅನ್ನು ಮೂಲತಃ 9 ವಿಭಾಗಗಳಾಗಿ ವಿಂಗಡಿಸಿದ್ದು, ಆಯಾ ವಿಭಾಗದ ಉಸ್ತುವಾರಿ ಅಧಿಕಾರಿ/ಸಿಬ್ಬಂದಿಗಳು ಪರಿಣಾಮಕಾರಿ ಸ್ವಚ್ಚತೆಗಾಗಿ ಆಧ್ಯತೆ ನೀಡುತ್ತಿದ್ದಾರೆ. ಇವೆಲ್ಲವುಗಳಿಗೆ ಉಸ್ತುವಾರಿಯಾಗಿ ಸಹಾಯಕ ತೋಟಗಾರಿಕೆ ನಿರ್ದೇಶಕರು ಮತ್ತು ತೋಟಗಾರಿಕೆ ಉಪ ನಿರ್ದೇಶಕರು ಲಾಲ್ ಬಾಗ್ ಸಸ್ಯತೋಟ ರವರು ಕಾರ್ಯನಿರ್ವಹಿಸುತ್ತಿದ್ದಾರೆ.
13. ಪ್ರವಾಸಿಗರು/ ವಾಯುವಿಹಾರಿಗಳು ಸಸ್ಯತೋಟದ ಒಳಗಡೆಗೆ ಪ್ಲಾಸ್ಟಿಕ್ ಬಾಟಲ್ / ಇತರೇ ಪ್ಲಾಸ್ಟಿಕ್ ವಸ್ತುಗಳು ಮತ್ತು ತಿಂಡಿ-ತಿನಿಸುಗಳ ಪೊಟ್ಟಣಗಳನ್ನು ತರದಂತೆ ನಿಯಂತ್ರಿಸಲು ಲಾಲ್ ಬಾಗ್ ನ ಎಲ್ಲಾ 4 ದ್ವಾರಗಳಲ್ಲಿಯೂ ಒಬ್ಬರು ಮಹಿಳಾ Home guard ಗಳನ್ನು 2020ನೇ ಸಾಲಿನಿಂದ ನೇಮಕ ಮಾಡಲಾಗಿದ್ದು, ಪ್ರತಿಯೊಬ್ಬರನ್ನು ತಪಾಸಣೆಗೊಳಿಸಿ ಒಳಬಿಡುತ್ತಾರೆ. ಪ್ಲಾಸ್ಟಿಕ್ ವಸ್ತು / ಬಾಟೆಲ್ ಗಳನ್ನು ಅಲ್ಲಿಯೇ ಸಂಗ್ರಹಿಸಲಾಗುತ್ತದೆ.
14. ಇನ್ನು ಮುಂದೆಯೂ ಸಹಾ ಸ್ವಚ್ಚತಾ ಪರಿಣಿತರ ಸಹಕಾರ ಮತ್ತು ಮಾರ್ಗದರ್ಶನವನ್ನು ಪಡೆದು ಲಾಲ್ ಬಾಗ್ ನ ಪರಿಣಾಮಕಾರಿ ಸ್ವಚ್ಚತೆಗೆ ಇಲಾಖೆಯು ಪ್ರಮುಖ ಆದ್ಯತೆ ನೀಡಲಿದೆ.
15. ಲಾಲ್ ಬಾಗ್ ನ ಸ್ವಚ್ಚತೆಗೆ ಮೇಲ್ಕಂಡಂತೆ ಹಲವು ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳಲಾಗಿದ್ದರೂ ಸಹಾ ಲಾಲ್ ಬಾಗ್ ಗೆ ಭೇಟಿ ನೀಡುವ ಪ್ರವಾಸಿಗರು/ಜನಸಾಮಾನ್ಯರು ಮತ್ತು ವಾಯುವಿಹಾರಿಗಳು ಡಸ್ಟ್ ಬಿನ್ಸ್ ಗಳಿದ್ದರೂ ಕಾಗದ, ಪೊಟ್ಟಣ, ಕೆಲವೊಮ್ಮೆ ಪ್ಲಾಸ್ಟಿಕ್ ಅನ್ನು ಸಹಾ ಎಲ್ಲೆಂದರಲ್ಲಿ ಬಿಸಾಡಿ ಹೋಗುತ್ತಾರೆ. ಐರೋಪ್ಯ ದೇಶಗಳಲ್ಲಿರುವ ಜನರ ಜವಾಬ್ದಾರಿಯಂತೆ ಇವರು ನಡೆದುಕೊಳ್ಳುವುದಿಲ್ಲ. ಲಾಲ್ ಬಾಗ್ ನಲ್ಲಿ ನೈರ್ಮಲ್ಯಯುತ ವಾತಾವರಣ ಸೃಷ್ಟಿಸಲು ಕೇವಲ ಸ್ವಚ್ಚತಾ ಸಿಬ್ಬಂದಿ, ಅಧಿಕಾರಿಗಳು ಕ್ರಮವಹಿಸುವುದರ ಜೊತೆಗೆ ಸಾರ್ವಜನಿಕರು/ವಾಯುವಿಹಾರಿಗಳ ಸಹಕಾರವು ಅತೀ ಮುಖ್ಯವಾಗಿದೆ.

| | | |
|---|---|---|
| 2 | ಪ್ಲಾಸ್ಟಿಕ್ ನಿಷೇಧಿಸಲು ಕೈಗೊಂಡಿರುವ ಕ್ರಮಗಳು | ಪ್ಲಾಸ್ಟಿಕ್ ನಿಷೇಧಕ್ಕೆ ಸಂಬಂಧಿಸಿದಂತೆ ಕೆಳಕಂಡಂತೆ ಕ್ರಮವಹಿಸಲಾಗಿದೆ.<br>1) ಮೇಲೆ ತಿಳಿಸಿರುವಂತೆ ಲಾಲ್ ಬಾಗ್ ನ 4 ದ್ವಾರಗಳ ಪ್ರವೇಶ ಸ್ಥಳಗಳಲ್ಲಿ ಪ್ರತ್ಯೇಕವಾಗಿ 4 ಜನ ಮಹಿಳಾ Home gurds ಸಿಬ್ಬಂದ್ದಿಗಳನ್ನು ನೇಮಿಸಲಾಗಿದ್ದು, ಅವರುಗಳು ಸಸ್ಯತೋಟವನ್ನು ಪ್ರವೇಶಿಸುವ ಪ್ರತಿ ಪ್ರವಾಸಿಗರನ್ನು ತಪಾಸಣೆಗೊಳಿಸಿ ಮೈಸೂರು ಜೂ ನಲ್ಲಿರುವಂತೆ ಎಲ್ಲಾ ತೆರನಾದ ಪ್ಲಾಸ್ಟಿಕ್ ಬಾಟಲ್, ಪ್ಲಾಸ್ಟಿಕ್ ವಸ್ತುಗಳು, ಫುಡ್ ಪ್ಯಾಕೇಟ್ಸ್ ಗಳನ್ನು ಅಲ್ಲಿಯೇ ಸಂಗ್ರಹಿಸಿ, ಪ್ರವಾಸಿಗರನ್ನು ಮಾತ್ರ ಒಳ ಬಿಡುತ್ತಾರೆ. ಇದರಿಂದ ಒಟ್ಟಾರೆ ದಿನವಹಿ ½ ಟ್ರಾಕ್ಟರ್ ನಷ್ಟು ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹಣೆ ಯಾಗುತ್ತದೆ. ಇದನ್ನು ಸಿದ್ದಾಪುರ ಗೇಟ್ ಬಳಿಯಲ್ಲಿರುವ ಬೇರ್ಪಡಿಸುವಿಕೆ ಕೇಂದ್ರದಲ್ಲಿ (Bifercation center) ನಿಯಮಾನುಸಾರ ಬೇರ್ಪಡಿಸಿ, ವಿಲೇವಾರಿ ಮಾಡಲಾಗುವುದು.<br>2) ಸಸ್ಯತೋಟದ ಎಲ್ಲಾ ಕಛೇರಿಗಳಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿರ್ಬಂಧಿಸಲಾಗಿದೆ. |
| 3 | ಲಾಲ್ ಬಾಗ್ ಒಳಾಂಗಣದ ರಸ್ತೆಗಳ ದುರಸ್ಥಿ ಮತ್ತು ಅಭಿವೃದ್ಧಿ | A. ವಾಯು ವಿಹಾರಿಗಳು/ಸಾರ್ವಜನಿಕರು ಪ್ರಸ್ತುತ ಪಾದಚಾರಿ ಮಾರ್ಗಗಳಿಗೆ ಸಂಬಂಧಿಸಿದಂತೆ ಕೆಳಕಂಡಂತೆ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಮಾರ್ಗಗಳು ಮಳೆಯಿಂದ ಹಾಳಾಗಿವೆ, ಕೆಲವು ಕಡೆ ಕೆಸರುಮಯವಾಗಿದೆ, ವಾಕಿಂಗ್ ಪಾಥ್ ಹಾಳಾಗಿದೆ, ಮಳೆ ನೀರು ರಸ್ತೆಯಲ್ಲಿ ನಿಲ್ಲುತ್ತಿದೆ, ಬೆಟ್ಟದ ಸುತ್ತಲಿನ ವಾಕಿಂಗ್ ಪಾಥ್ ದುರಸ್ತಿಗೊಳಿಸಿ, 10 ಅಡಿ ಅಗಲದ ರಸ್ತೆ ನಿರ್ಮಿಸಬೇಕು, ಮಳೆ ಬಂದಾಗ ರಸ್ತೆಗಳು ಹಾಳಾಗುತ್ತವೆ.<br>ಲಾಲ್ ಬಾಗ್ ನಲ್ಲಿ 6 ಕಿ.ಮೀ ಉದ್ದದ ಟಾರ್ ರಸ್ತೆ 8 ಕಿ.ಮೀ ಉದ್ದದ ಪಾದಚಾರಿ ಒಳ ರಸ್ತೆಗಳಿವೆ. ಈ ಪೈಕಿ ಆಸ್ ಪಾಲ್ಟ್ ರಸ್ತೆಗಳಿಗೆ ಕಳೆದ 35 ವರ್ಷಗಳಿಂದ ಟಾರ್ ಹಾಕದ ಕಾರಣ ರಸ್ತೆಗಳು ಅಲ್ಲಲ್ಲಿ ಗುಂಡಿ ಬಿದ್ದು ಸರ್ವರ ಸಂಚಾರಕ್ಕೆ ತೀವ್ರ ತೊಂದರೆಯಾಗಿತ್ತು, 2018-19ನೇ ಸಾಲಿನಲ್ಲಿ ಲಾಲ್ ಬಾಗ್ ನ ಆಸ್ ಪಾಲ್ಟ್ ರಸ್ತೆಯನ್ನು ರೂ.3.0 ಕೋಟಿಗಳ ವೆಚ್ಚದಲ್ಲಿ ಮರು ಡಾಂಭರೀಕರಣ ಮಾಡಿ |

ಅಭಿವೃದ್ಧಿಪಡಿಸಲಾಗಿರುತ್ತದೆ. ಹಾಗೆಯೇ ರಾಜಾ ವೃತ್ತದಿಂದ ಮುಖ್ಯ ಗೇಟ್ ಗೆ ತೆರಳುವ ಮುರ್ರಂ ರಸ್ತೆ, ಡಿಹೆಚ್‌ಓ ಹುಲ್ಲುಹಾಸಿನ ನಡುವೆ ಹಾದು ಹೋಗುವ ಮಣ್ಣಿನ ರಸ್ತೆಗೆ ಹೊಸದಾಗಿ ಮುರ್ರಂ ಹಾಕಿ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗಿದೆ.

ಪ್ರಸ್ತುತ ವರ್ಷದಲ್ಲಿ ಬಿದ್ದ ಬಾರಿ ಮಳೆಯಿಂದ ಲಾಲ್ ಬಾಗ್ ಕೆರೆ ಕೋಡಿ ಬಿದ್ದು ನೀರು ಹರಿದಿದೆ. ಜೊತೆಗೆ ಎಲ್ಲಾ ಮಣ್ಣಿನ ರಸ್ತೆಗಳ ಮೇಲೂ ಮಳೆ ನೀರು ಹೆಚ್ಚು ರಭಸವಾಗಿ ಹರಿದ ಕಾರಣ ಹಲವು ಕಡೆ ಪಾದಚಾರಿ ರಸ್ತೆಗಳು ಹಾಳಾಗಿವೆ.

ಆಯ್ದ ಈ ಎಲ್ಲಾ ರಸ್ತೆಗಳನ್ನು ದುರಸ್ಥಿಗೊಳಿಸಲು ಇಂಜಿನಿಯರಿಂಗ್ ವಿಭಾಗದಿಂದ ಅಂದಾಜು ಪಟ್ಟಿ ತಯಾರಿಸಿದ್ದು, ಒಟ್ಟಾರೆ ಅಂದಾಜು ಮೊತ್ತವು ರೂ.2.0 ಕೋಟಿಗಳಾಗಿರುತ್ತದೆ. ಅನುದಾನ ಲಭ್ಯತೆಗೆ ಅನುಗುಣವಾಗಿ ಹಂತ-ಹಂತವಾಗಿ ರಸ್ತೆ ದುರಸ್ಥಿ/ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುವುದು.

ತೀವ್ರವಾದ ಮಳೆಯಿಂದಾಗಿ ಎಲ್ಲಾ ಹಳೆಯ ಡ್ರೈನ್ ಗಳು ಸಹಾ ಹೂತುಹೋಗಿದ್ದು, ಡ್ರೈನ್ ಗಳಲ್ಲಿ ಹೂಳು ತೆಗೆಸುವುದು ಮತ್ತು ಹೊಸದಾಗಿ ಕೆಲವು ಕಡೆ ಡ್ರೈನ್ ಗಳನ್ನೂ ಸಹಾ ಅನುದಾನ ಲಭ್ಯತೆಗೆ ಅನುಗುಣವಾಗಿ ಹಂತ-ಹಂತವಾಗಿ ಅಭಿವೃದ್ಧಿಪಡಿಸಲಾಗುವುದು.

ಲಾಲ್ ಬಾಗ್ ನ ಕಾಂಪೌಂಡ್ ಗೆ ಹೊಂದಿಕೊಂಡಂತೆ 5 ಕಿ.ಮೀ ಉದ್ದದ ವಾಕಿಂಗ್ ಪಾತ್ ಅನ್ನು ಸಹಾ 2008-09ನೇ ಸಾಲಿನಲ್ಲಿ ಅಭಿವೃದ್ಧಿಪಡಿಸಲಾಗಿರುತ್ತದೆ.

ಲಾಲ್ ಬಾಗ್ ಒಳಾಂಗಣದ ರಸ್ತೆಗಳು ಬಹಳ ವಿಸ್ತಾರವಾಗಿದ್ದು, ಲಾಲ್ ಬಾಗ್ ಭೌಂಡರಿಯಲ್ಲಿ 5 ಕಿ.ಮೀ ಉದ್ದದ ಪಾಥ್ ಅನ್ನು ಸಹಾ ಹೆಚ್ಚುವರಿಯಾಗಿ ಅಭಿವೃದ್ಧಿ ಮಾಡಿರುವುದರಿಂದ ಹೊಸದಾಗಿ ರಸ್ತೆ ನಿರ್ಮಿಸುವುದು ಇಲ್ಲವೇ ಅಗಲೀಕರಣ ಕಾರ್ಯ ಸಸ್ಯ ಪ್ರಭೇದಗಳ ಸಂರಕ್ಷಣಾ ದೃಷ್ಟಿಯಿಂದ ಸಾಧ್ಯವಾಗುವುದಿಲ್ಲ. ಉಳಿದಂತೆ ಹಾಲಿ ರಸ್ತೆಗಳ ದುರಸ್ಥಿ, ಅಭಿವೃದ್ಧಿ ಮತ್ತು ಉನ್ನತೀಕರಣ ಕಾರ್ಯಕ್ಕೆ ಅನುದಾನ ಲಭ್ಯತೆಯನ್ನು ಅನುಸರಿಸಿ ಅಗತ್ಯ ಕೈಗೊಳ್ಳಲಾಗುವುದು.

| | | |
|---|---|---|
| 4 | ಲಾಲ್ ಬಾಗ್ ನ ಐತಿಹಾಸಿಕ ಕಟ್ಟಡಗಳ ಸಂರಕ್ಷಣೆ | ಲಾಲ್ ಬಾಗ್ ನಲ್ಲಿ ಬ್ರಿಟೀಷ್ ಆಳ್ವಿಕೆಯ ಕಾಲದಲ್ಲಿ ನಿರ್ಮಾಣಗೊಂಡ ತುಂಬಾ ಹಳೆಯ ವರ್ಷಕ್ಕೂ ಹಳೆಯ ಕಟ್ಟಡಗಳಿದ್ದು, ಅವುಗಳು ಶಿಥಿಲಾವಸ್ಥೆಗೆ ತಲುಪುವ ಹಂತದಲ್ಲಿರುವುದನ್ನು ಗಂಭೀರವಾಗಿ ಪರಿಗಣಿಸಿ ತಾಂತ್ರಿಕ ಪರಿಣಿತರ ಸಲಹೆ ಪಡೆದು ಇಂತಹ ಎಲ್ಲಾ ಕಟ್ಟಡಗಳ Strengthening ಕಾರ್ಯವನ್ನು ವೈಜ್ಞಾನಿಕವಾಗಿ ಕೈಗೊಂಡು ಸಂರಕ್ಷಿಸಲಾಗಿದೆ. ತೋಟಗಾರಿಕೆ ಇಲಾಖೆ ವತಿಯಿಂದ ಸಂರಕ್ಷಣೆಗೊಂಡ ಲಾಲ್ ಬಾಗ್ ನಲ್ಲಿ ಸಂರಕ್ಷಿಸಲಾಗಿರುವ ಕಟ್ಟಡಗಳ ವಿವರಗಳು ಇಂತಿವೆ.<br>1. ನಿರ್ದೇಶನಾಲಯದ ಕಟ್ಟಡ : (ಸಂರಕ್ಷಣಾ ಅವಧಿ 2010-11)<br>2. ಪ್ರಸ್ತುತ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಏಜೆನ್ಸಿ ಕಛೇರಿ ಇರುವ ಕಟ್ಟಡ: : (ಸಂರಕ್ಷಣಾ ಅವಧಿ 2009-10)<br>3. ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳಿರುವ ಕಟ್ಟಡ: (ಸಂರಕ್ಷಣಾ ಅವಧಿ 2017-18)<br>4. ಡವ್ ಕಾಟ್: (ಸಂರಕ್ಷಣಾ ಅವಧಿ 2022)<br>5. ಕ್ಯಂಬಿಗಲ್ ಹಾಲ್ (ಮರು ನಿರ್ಮಾಣ ಅವಧಿ 2019-20)<br>6. ಡಾ: ಎಂ.ಹೆಚ್.ಮರೀಗೌಡ ರಾಷ್ಟ್ರೀಯ ತೋಟಗಾರಿಕೆ ಗ್ರಂಥಾಲಯ ಮತ್ತು ವಸ್ತು ಸಂಗ್ರಹಾಲಯ ಕಟ್ಟಡ (2020-21) |
| 5 | ಲಾಲ್ ಬಾಗ್ ಕೆರೆಯ ಸಂರಕ್ಷಣೆ | 30 ಎಕರೆ ವಿಸ್ತೀರ್ಣದಲ್ಲಿರುವ ಲಾಲ್ ಬಾಗ್ ಕೆರೆಯ ಒಟ್ಟಾರೆ ಸಂರಕ್ಷಣೆಗೆ ಪೂರಕವಾಗುವಂತೆ ಕೆಳಕಂಡ ಅವಶ್ಯಕ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>1) ಹಿಂದೆ ಲಾಲ್ ಬಾಗ್ ಕೆರೆಗೆ ಸೀವೇಜ್ ನೀರು ಬಂದು ಸೇರುತ್ತಿತ್ತು. ತಜ್ಞರ ಸಲಹೆ ಪಡೆದು ಕೆರೆಯ ಹಿಂದಿನ ರಸ್ತೆ (ಅಶೋಕಾ ಪಿಲ್ಲರ್ ರಸ್ತೆ) ಬಳಿ ಇದ್ದ ಮುಖ್ಯ intel ನಿಂದ ದನ್ವಂತರಿ ವನದ ಮುಖೇನ ಲಾಲ್ ಬಾಗ್ ಮೈನ್ ಗೇಟ್ ವರೆಗೆ MTR ಗೇಟ್ ಬಳಿ ಇರುವ ಡ್ರೇನ್ ವರೆಗೆ ಪ್ರತ್ಯೇಕ ಸೀವೇಜ್ drain ಅನ್ನು ರೂ.1.0 ಕೋಟಿಗಳ ಇಲಾಖೆ ಮತ್ತು BWSSB ಯ ಅನುದಾನ ಮತ್ತು ಸಹಕಾರದಲ್ಲಿ 2004-05ನೇ ಸಾಲಿನಲ್ಲಿ ನಿರ್ಮಿಸುವ ಮುಖೇನ ಕಲುಷಿತ ನೀರು ಕೆರೆಗೆ ಬರುವುದನ್ನು ಸಂಪೂರ್ಣವಾಗಿ ತಡೆಗಟ್ಟಲಾಗಿದೆ.<br>2) ಪ್ರಸ್ತುತ ಜಯನಗರ 4ನೇ ಬ್ಲಾಕ್ ಅಶೋಕಾ ಪಿಲ್ಲರ್, ಸಿದ್ದಾಪುರ ಮುಂತಾದ ಪ್ರದೇಶಗಳಿಂದ ಸ್ಟಾರಂ ವಾಟರ್ ಡ್ರೈನ್ ಮುಖೇನ ಬರುವ |

ಮಳೆ ನೀರು ಮಾತ್ರ ಲಾಲ್ ಬಾಗ್ ಕೆರೆಗೆ ಬರುತ್ತಿದೆ.

3) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ 2009-10ನೇ ವರ್ಷದಲ್ಲಿ ರೂ.5.0 ಕೋಟಿಗಳ ಅನುದಾನದಲ್ಲಿ 2ನೇ ಹಂತದ ಅಭಿವೃದ್ಧಿ ಕಾರ್ಯವಾಗಿ ಬ್ರಿಡ್ಜ್ ಮತ್ತ ಕೆರೆ ದ್ವೀಪದ ಸುತ್ತಲೂ ಸೆಕ್ಯೂರಿಟಿ ಪೆನ್ಸಿಂಗ್ ಅಳವಡಿಸಲಾಗಿದೆ. ಕೆರೆಯ ದ್ವೀಪ, ಕೆರೆಯ ಬದು ಕುಸಿಯದಂತೆ ಸಿಮೆಂಟ್ ರಿವಿಟ್ ಮೆಂಟ್ ಮಾಡಿ, ಕಲ್ಲಿನ ಇಳಿಜಾರು ರಿವಿಟ್ ಮೆಂಟ್ ಅನ್ನು ಸಹಾ ನಿರ್ಮಿಸಲಾಗಿದೆ.

4) ಕೆರೆಯ ನೀರಿನ ಶುದ್ಧಿಕರಣಕ್ಕಾಗಿ BOSH ಸಂಸ್ಥೆಯ CSR ಸಹಕಾರದಲ್ಲಿ 5 ಏರೇಟರ್ಸ್ ಗಳನ್ನು ಸಹಾ ಅಳವಡಿಸಲಾಗಿದೆ. ಇವುಗಳು ಕೆರೆಯ ನೀರಿನ ಶುದ್ಧೀಕರಣಕ್ಕೆ ಹೆಚ್ಚು ಸಹಾಯಕಾರಿಯಾಗಿವೆ.

5) <u>ಆಕರ್ಷಕ ನೀರಿನ ಜಲಪಾತ ನಿರ್ಮಾಣ:</u>

ತಜ್ಞರಾದ ಡಾ: ರವಿಶಂಕರ್ ರವರ ಮಾರ್ಗದರ್ಶನದಲ್ಲಿ Green Technology ತಂತ್ರಜ್ಞಾನದಲ್ಲಿ ಕೆರೆಯ ನೀರಿನ ಶುದ್ಧೀಕರಣ ಮತ್ತು ನೈರ್ಮಲೀಕರಣಕ್ಕಾಗಿ ರೂ.2.5 ಕೋಟಿಗಳ ವೆಚ್ಚದಲ್ಲಿ ಸಣ್ಣ ಕೆರೆಯ ಕಲ್ಲಿನ ಬಂಡೆಗೋಡೆಗೆ ಹೊಂದಿಕೊಂಡಂತೆ ಆಕರ್ಷಕ ಜಲಪಾತವನ್ನು ನಿರ್ಮಿಸಲಾಗಿದೆ. ಇದರಿಂದಾಗುತ್ತಿರುವ ಲಾಭಗಳು ಇಂತಿವೆ.

1) ದೊಡ್ಡ ಕೆರೆಯಿಂದ ಸಣ್ಣ ಕೆರೆಯ ಜಲಪಾತಕ್ಕೆ 250 HP ಮೋಟಾರ್ ನಿಂದ ನೀರು ಹರಿದು ಜಲಪಾತದ ಮುಖೇನ ರಭಸವಾಗಿ ಬೀಳುವುದರಿಂದ Green alge ಚಿದ್ರಗೊಂಡು ನೀರು ತಿಳಿಯಾಗುತ್ತದೆ. ಹಾಗೂ ನೀರಿಗೆ ಹೆಚ್ಚು ಆಮ್ಲಜನಕ ಸೇರಿ ಕೆರೆಯ ಜಲಚರಗಳಾದ ಮೀನು, ಆಮೆ, ಏಡಿ ಇತ್ಯಾದಿಗಳಿಗೆ ಇದು ಜೀವ ಸೆಲೆಯಾಗಿದೆ.

2) ಹಿಂದೆ ಚಿಕ್ಕ ಕೆರೆಯಲ್ಲಿ ಹೆಚ್ಚು ನೀರು ಇರುತ್ತಿರಲಿಲ್ಲ, ಪ್ರಸ್ತುತ ಇಲ್ಲಿ ಸದಾ ನೀರು ತುಂಬಿರುವುದರಿಂದ ಹಾಗೂ ಹಲವು ನೀರು ಕಳೆ ಗಿಡಗಳು ಬದುವಿನ ಸಮೀಪದಲ್ಲಿ ಬೆಳೆದಿರುವುದರಿಂದ ಇದೊಂದು ವೆಟ್ ಲ್ಯಾಂಡ್ ಮಾದರಿಯಾಗಿ ಪರಿವರ್ತಿತವಾಗಿ ನೂರಾರು ಪಕ್ಷಿಗಳ ತಾಣವಾಗಿದೆ. ಕಮಲದ ಗಿಡಗಳನ್ನು ಬೆಳೆಸಲಾಗಿದೆ. ಇದು ಹಲವು ಪಕ್ಷಿ ಪ್ರಭೇದಗಳಿಗೆ ಆಸರೆಯಾಗಿದೆ.

3) ಜಲಪಾತವು ಲಾಲ್ ಬಾಗ್ ಅನ್ನು ಸಂದರ್ಶಿಸುವ ಪ್ರವಾಸಿಗರಿಗೆ ಪ್ರಮುಖ ಆಕರ್ಷಕಣೀಯ ಕೆಂದ್ರವಾಗಿದೆ.

| | | |
|---|---|---|
| | | 4) ಜಲಪಾತದಿಂದ ದುಮ್ಮಿಕ್ಕುವ ನೀರಿನ ತೇವಾಂಶ ಲಾಲ್ ಬಾಗ್ ಪರಿಸರಕ್ಕೆ ಮತ್ತಷ್ಟು ತಂಪಿನ ಹವಾಭರಿತ ವಾತಾವರಣ ವೃದ್ಧಿಗೆ ಸಹಾಯಕಾರಿಯಾಗಿದೆ.<br>5) ಕೆರೆಯ ಪರಿಸರದಲ್ಲಿ ಪಕ್ಷಿಗಳಿಗೆ ಸಹಾಯಕಾರಿಯಾಗುವ ಆಯ್ದ ಗಿಡ ಮರಗಳನ್ನು ಬೆಳೆಸಲು ಕ್ರಮ ಕೈಗೊಳ್ಳಲಾಗಿದೆ.<br>6) ದೊಡ್ಡ ಮತ್ತು ಸಣ್ಣ ಕೆರೆಯ ನಡುವಿನ ರಸ್ತೆ ಹಿಂದೆ ಶಿಥಿಲವಾಗಿದ್ದು, ಪ್ರಸ್ತುತ ವೈಜ್ಞಾನಿಕವಾಗಿ ಸಿಮೆಂಟ್ ತಡೆಗೋಡೆ ನಿರ್ಮಿಸಿದ್ದು, ಜಲಪಾತ ವೀಕ್ಷಣೆ ಮತ್ತು ಕೆರೆಯ ಆಹ್ಲಾದವನ್ನು ಸವಿಯಲು ಅನುವಾಗುವಂತೆ ಪ್ರತ್ಯೇಕ ವ್ಯೂಡೆಕ್ ಅನ್ನು ನಿರ್ಮಿಸಲಾಗಿದೆ. |
| 6 | ವುಡ್ ಮ್ಯೂಸಿಯಂ ಸ್ಥಾಪನೆ | ಲಾಲ್ ಬಾಗ್ ನಲ್ಲಿ ನೂರು, ಇನ್ನೂರು ವರ್ಷಗಳಿಂತಲೂ ವಯಸ್ಸಾದ ಮಹಾವೃಕ್ಷಗಳಿವೆ. ಹೀಗೆ ಹೆಚ್ಚು ಮಳೆ-ಗಾಳಿಗೆ ಸಿಲುಕಿ ಸ್ವಾಭಾವಿಕವಾಗಿ ಧರೆಗುರುಳಿದ ಟಿಪ್ಪು ಕಾಲದ 250 ವರ್ಷ ಹಳೆಯ ಮಾವಿನ ಮರ ಹಾಗೂ 200 ವರ್ಷಗಳಷ್ಟು ಹಳೆಯ ಬ್ರಿಟಿಷ್ ಆಳ್ವಿಕೆ ಸಮಯದಲ್ಲಿ ಆಸ್ಟ್ರೇಲಿಯಾದಿಂದ ಮೊದಲ ಬಾರಿಗೆ ಭಾರತಕ್ಕೆ ಅದರಲ್ಲಿಯೂ ಲಾಲ್ ಬಾಗ್ ಗೆ ಪರಿಚಯಿಸಿದ್ದ ಬೃಹತ್ ನೀಲಗಿರಿ ಮರ ಮತ್ತು ಇತರೆ 12 ಸಂಖ್ಯೆಯ ಮರಗಳನ್ನು ಉರುವಲು ಅಥವಾ ಇನ್ನಾವುದೇ ಉದ್ದೇಶಕ್ಕೆ ವಿಲೇವಾರಿ ಮಾಡದೇ, ಐತಿಹಾಸಿಕ ಗಾಜಿನ ಮನೆಯ ಹಿಂಭಾಗದ ಜಾವಾಫಿಗ್ ಪ್ರದೇಶಕ್ಕೆ ಸಾಗಿಸಿ, 25 ರಾಜ್ಯಗಳ ಪರಿಣಿತ ಮರಗೆತ್ತನಾ ಶಿಲ್ಪಿಗಳನ್ನು ಕರೆಸಿ ಶಿಲ್ಪಕಲಾ ಅಕಾಡೆಮಿಯ ಸಹಕಾರದಲ್ಲಿ15 ದಿವಸಗಳ **"ರಾಷ್ಟ್ರೀಯ ಮರಗೆತ್ತನಾ ಶಿಬಿರ"** ವನ್ನು ಆಯೋಜಿಸುವ ಮುಖೇನ ಮರದ 35 ಬೃಹತ್ ಕಾಷ್ಠ ಶಿಲ್ಪಗಳು ಸಿದ್ಧಗೊಂಡಿದ್ದು, ಅವುಗಳನ್ನು ಮೇಲ್ಕಂಡ ಪ್ರದೇಶದಲ್ಲಿ ಅತ್ಯಂತ ವೈಜ್ಞಾನಿಕವಾಗಿ ಪ್ರತಿಷ್ಠಾಪಿಸಲಾಗಿದೆ. ಇದು **"ಭಾರತದಲ್ಲಿಯೇ ಪ್ರಪ್ರಥಮ Outdoor wood sculpture museum"** ಆಗಿರುವುದು ಲಾಲ್ ಬಾಗ್ ನ ಹೆಗ್ಗಳಿಕೆಯನ್ನು ಹಿಮ್ಮಡಿಗೊಳಿಸಿದೆ. ಜೊತೆಗೆ ಸಾವಿರಾರು ಪ್ರವಾಸಿಗರನ್ನು ಸದಾ ತನ್ನತ್ತ ಸೆಳೆಯುತ್ತಿದೆ. ಜೊತೆಗೆ ಲಾಲ್ ಬಾಗ್ ಅನ್ನು ಸಂದರ್ಶಿಸುವ ಲಕ್ಷಾಂತರ ಜನರಿಗೆ ಹೇಗೆ ಬಿದ್ದ ಮರವನ್ನು ಸದ್ಬಳಕೆ ಮಾಡಿಕೊಳ್ಳಬಹುದು ಎಂಬುದರ ಬಗ್ಗೆ ಸಂದೇಶ ಸಾರುತ್ತಿದೆ.<br>ಮುಂದೆಯೂ ಸ್ವಾಭಾವಿಕವಾಗಿ ಲಾಲ್ ಬಾಗ್ ನಲ್ಲಿ ಯಾವುದೇ ಮರಗಳು ಧರೆಗುರುಳಿದಲ್ಲಿ ಅವುಗಳನ್ನು ಅದನ್ನು ಕಾಷ್ಠಶಿಲ್ಪವಾಗಿಸಿ ಈ ವುಡ್ ಮ್ಯೂಸಿಯಂಗೆ ಸೇರ್ಪಡೆ ಮಾಡುವುದು ನಮ್ಮ ಆಲೋಚನೆಯಾಗಿದೆ. |

| | | |
|---|---|---|
| 7 | ನೀರಿನ ಮತ್ತು ತೇವಾಂಶದಲ್ಲಿ ಬೆಳೆಯುವ ಸಸ್ಯ ಪ್ರಭೇದಗಳಿಗಾಗಿ ಸಂಕನ್ ಗಾರ್ಡನ್ ಅಭಿವೃದ್ಧಿ | ಲಾಲ್ ಬಾಗ್ ನಲ್ಲಿನ ಬೋನ್ಸಾಯ್ ಗಾರ್ಡನ್, ಕಾಕ್ಟೈ ಗಾರ್ಡನ್, ಟೋಪಿಯರಿ ಗಾರ್ಡನ್, ರೀತಿಯಲ್ಲಿ ಧನ್ವಂತರಿ ವನದ 1 ಎಕರೆ ಪ್ರದೇಶದಲ್ಲಿ ರೂ.2.5 ಕೋಟಿಗಳ ವೆಚ್ಚದಲ್ಲಿ ನೀರು ಮತ್ತು ತೇವಾಂದಲ್ಲಿಯೇ ಬೆಳೆಯುವ ವಿಶೇಷ ಸಸ್ಯ ಪ್ರಭೇದಗಳ, ಸಂಗ್ರಹಣೆ ಮತ್ತು ಸಂರಕ್ಷಣೆಗಾಗಿ ಪ್ರತ್ಯೇಕ ಸಂಕನ್ ಗಾರ್ಡನ್ ಅನ್ನು ಅಭಿವೃದ್ಧಿಪಡಿಸಲಾಗಿದೆ. ಈ ವರೆಗೆ ಒಟ್ಟಾರೆ 78 ಕ್ಕೂ ಹೆಚ್ಚು ಸಸ್ಯ ಪ್ರಭೇದಗಳನ್ನು ವೈಜ್ಞಾನಿಕವಾಗಿ ನೆಟ್ಟು ಬೆಳೆಸಲಾಗಿದೆ. ಇವುಗಳಲ್ಲಿ 10 ವಿಧದ ಆಕರ್ಷಕ ಅಲೋಕೇಷಿಯಾ, ವಾಟರ್ ಬ್ಯಾಂಬೋ, ಪ್ಯಾಪಿರೋಸ್, ನಿಂಫಿಯಾಗಳು, ದೈತ್ಯ ಸುವರ್ಣಗೆಡ್ಡೆ, ಕೆಂಪುಬಾಳೆ, ಹಲವು ಜಾತಿಯ ಲಿಲ್ಲಿಗಳು, ಅಲ್ ಪೀನಿಯಾ, ಹೆಲಿಕೋನಿಯಾಗಳು ಸೇರಿವೆ. ವಿದ್ಯಾರ್ಥಿಗಳಿಗೆ, ಸಸ್ಯಶಾಸ್ತ್ರೀಯ ಆಸಕ್ತರಿಗೆ ಹಾಗೂ ಪ್ರವಾಸಿಗರಿಗೆ ಸಂಕನ್ ಗಾರ್ಡನ್ ವಿಶೇಷ ಮಾಹಿತಿ ಮತ್ತು ಅನುಭವವನ್ನು ನೀಡಲಿದೆ. |
| 8 | ನೀರಿನ ಕೊಳಗಳ ಪುನಃಶ್ಚೇತನ | ಲಾಲ್ ಬಾಗ್ ಕೆರೆಯ ಬಳಿ ಇರುವ 2 ನೀರಿನ ಕೊಳಗಳಿಗೆ ಹಿಂದೆ ನೀರು ಸಂಗ್ರಹಣೆಯಾಗದೆ ಜೀವಂತಿಕೆಯನ್ನು ಕಳೆದುಕೊಂಡಿದ್ದವು. Wet land ಪರಿಣಿತರಾದ ಡಾ: ರವಿಚಂದ್ರ ಮತ್ತು ಡಾ: ಯಲ್ಲಪ್ಪರೆಡ್ಡಿ ರವರ ಮಾರ್ಗದರ್ಶನದಲ್ಲಿ ಯುನೈಟೆಡ್ ವೇ ಸಂಸ್ಥೆಯ CSR ಸಹಕಾರದಲ್ಲಿ ಈ 2 ಕೊಳಗಳನ್ನು ಪುನಶ್ಚೇತನಗೊಳಿಸಲಾಗಿದೆ. ಮಳೆ ನೀರು ಹರಿದು ಕೊಳ ಸೇರುವಂತೆ ನೀರಿನ ಕಾಲುವೆಗಳನ್ನು ನಿರ್ಮಿಸಿದ್ದು, ಪ್ರಸ್ತುತ ಮಳೆ ನೀರು ಕೊಳವನ್ನು ಸೇರುತ್ತಿದ್ದು, ಸದಾ ನೀರಿನಿಂದ ತುಂಬಿರುತ್ತವೆ. ಕೊಳದ ಬದು ಮತ್ತು ದ್ವೀಪಗಳಿಗೆ ಕಲ್ಲಿನ ರಿವಿಟ್ ಮೆಂಟ್ ಕಾರ್ಯ ಕೈಗೊಳ್ಳಲಾಗಿದೆ. ಹೂಳೂ ತೆಗೆದು ಸುಂದರಗೊಳಿಸಲಾಗಿದೆ. ಹಾಲಿ ಈ ಕೊಳಗಳು ಜಲಚರಗಳು ಮತ್ತು ನೀರಿನ ಸಸ್ಯಗಳ ವೃದ್ಧಿಯೊಂದಿಗೆ ಹೊಸ ಜೀವಂತಿಕೆಯನ್ನು ಪಡೆದುಕೊಂಡಿವೆ. |
| 9 | ಮಳೆ ನೀರಿನ ಸಂರಕ್ಷಣೆಗೆ ಹಿಂಗು ಗುಂಡಿಗಳ ಸ್ಥಾಪನೆ | ಲಾಲ್ ಬಾಗ್ 240 ಎಕರೆ ವಿಸ್ತೀರ್ಣದ ಬಹು ದೊಡ್ಡ ಸಸ್ಯತೋಟ. ಲಾಲ್ ಬಾಗ್ ಕೆರೆಯನ್ನು ಹೊರತುಪಡಿಸಿದರೆ, ಬೇರೆ ಪ್ರದೇಶದಲ್ಲಿ ಮಳೆ ನೀರಿನ ಸಮರ್ಪಕ ಸಂರಕ್ಷಣೆಗೆ ಹೆಚ್ಚು ಅವಕಾಶವಿರಲಿಲ್ಲ. ಕಾರಣವೆಂದರೆ ಸಿದ್ದಾಪುರ ಗೇಟ್ ಮತ್ತು ವೆಸ್ಟ್ ಗೇಟ್ ಪ್ರದೇಶವು ಎತ್ತರದಲ್ಲಿದ್ದು ಮೇನ್ ಗೇಟ್ ಕಡೆಗಾದಂತೆ ಒಟ್ಟಾರೆ ಲಾಲ್ ಬಾಗ್ ನ ಭೂ ಪ್ರದೇಶವು ಇಳಿಜಾರಿನಿಂದ ಕೂಡಿದೆ. ಹಾಗಾಗಿ ಎಷ್ಟೋ ಮಳೆ ಬಿದ್ದರು ನೀರು ಎತ್ತರದ ಪ್ರದೇಶದಿಂದ ಹರಿದು ಲಾಲ್ ಬಾಗ್ ಹೊರ ಹೋಗುತ್ತಿತ್ತು. ಇದನ್ನು ಮನಗಂಡು ಮಳೆ ನೀರಿನ ಸಮರ್ಪಕ ಸಂರಕ್ಷಣೆಗೆ IISC ಯ ವಿಜ್ಞಾನಿ ಡಾ: ಶಿವಕುಮಾರ್, ಬೆಂಗಳೂರು ವಿಶ್ವ |

| | | |
|---|---|---|
| | | ವಿದ್ಯಾನಿಲಯದ ಡಾ: ರವಿಚಂದ್ರ ರವರ ವೈಜ್ಞಾನಿಕ ಮಾರ್ಗದರ್ಶನದಲ್ಲಿ ಅವಶ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಈ ಸಂಬಂಧ ಕೆಳಕಂಡಂತೆ ಕ್ರಮವಹಿಸಲಾಗಿದೆ.<br>1) ಇಲಾಖೆಯ ವತಿಯಿಂದ 4 ಅಡಿ ಅಗಲ x 15 ಅಡಿ ಆಳದ 75 ಮಳೆ ನೀರು ಹಿಂಗುಗುಂಡಿಗಳನ್ನು ನಿರ್ಮಿಸಲಾಗಿದೆ.<br>2) ಯುನೈಟೆಡ್ ವೇ ಸಂಸ್ಥೆಯ ರೂ.1.2 ಕೋಟಿಗಳ CSR ಸಹಕಾರದಿಂದ 4 ಅಡಿ ಅಗಲ x 15 ಅಡಿ ಆಳದ 250 ಮಳೆ ನೀರು ಹಿಂಗುಗುಂಡಿಗಳನ್ನು ಸಸ್ಯತೋಟದ ಆಯ್ದ ಭಾಗಗಳಲ್ಲಿ ನಿರ್ಮಿಸಲಾಗಿದೆ. ಪ್ರಸ್ತುತವೂ ಈ ಕಾರ್ಯ ಪ್ರಗತಿಯಲ್ಲಿದೆ.<br>ಮೇಲ್ಕಂಡ ಹಿಂಗು ಗುಂಡಿಗಳನ್ನು ಲಾಲ್ ಬಾಗ್ ನ 3 ಪ್ರಮುಖ ನೀರು ಹರಿಯುವ ಹಳ್ಳಗಳು, ಎತ್ತರ ಹಾಗೂ ತಗ್ಗು ಪ್ರದೇಶಗಳಲ್ಲಿಯೂ ತೆರೆಯಲಾಗಿದೆ.<br><u>ಹಿಂಗು ಗುಂಡಿಗಳಿಂದ ಆಗಿರುವ ಪ್ರಯೋಜನಗಳು:</u><br>1) ಪ್ರತಿ ಹಿಂಗು ಗುಂಡಿಯು ಪ್ರತಿ ಮಳೆಗೆ ಕನಿಷ್ಟ 10 ಸಾವಿರ ಲೀಟರ್ ಮಳೆ ನೀರನ್ನು ಸಂಗ್ರಹಿಸುತ್ತದೆ. ಒಟ್ಟಾರೆ 325 ಹಿಂಗು ಗುಂಡಿಗಳು ಪ್ರತಿ ಮಳೆಗೆ ಕನಿಷ್ಟ 3.5 ಲಕ್ಷ ಲೀಟರ್ ನೀರನ್ನು ಸಂಗ್ರಹಿಸಿ ಭೂಮಿಗೆ ಹಿಂಗಿಸುತ್ತವೆ. ಇದರಿಂದ ಅಂತರ್ ಜಲಮಟ್ಟವು ಗಣನೀಯವಾಗಿ ಏರಿಕೆಯಾಗಿದೆ.<br>2) ಇದರಿಂದ ದೀರ್ಘಕಾಲದಿಂದ ಬೆಳೆದಿರುವ ಲಾಲ್ ಬಾಗ್ ನ ಗಿಡ, ಮರ, ವೃಕ್ಷಗಳಿಗೆ ನೀರೂದಗಿಸುವ ಮೂಲವಾಗಿದೆ.<br>3) ಒಟ್ಟಾರೆ ಅಂತರ್ ಜಲಮಟ್ಟ ಗಣನೀಯವಾಗಿ ಹೆಚ್ಚಿದೆ (ಹಿಂದೆ 30 ಅಡಿ ಆಳಕ್ಕಿದ್ದ ತೇವಾಂಶ ಇಂದು 8-10 ಅಡಿಗೆ ಹೆಚ್ಚಿದೆ)<br>4) ಕೊಳವೆ ಬಾವಿ / ಸ್ಪ್ರಿಂಕ್ಲರ್ಸ್ ಗಳ ಬಳಕೆ ಕಡಿಮೆಯಾಗಿ ಲಾಲ್ ಬಾಗ್ ನ ಒಟ್ಟಾರೆ ವಿದ್ಯುತ್ ವೆಚ್ಚ ಕೂಡ ತಗ್ಗಿದೆ. |
| 10 | ಲಾಲ್ ಬಾಗ್ ಜೋಡಿ ರಸ್ತೆ ಬಳಿ ಪ್ರವಾಸಿಗರ ಅನುಕೂಲಕ್ಕಾಗಿ ಸುಸಜ್ಜಿತ ವಾಹನ ನಿಲ್ದಾಣದ ಅಭಿವೃದ್ಧಿ | ಲಾಲ್ ಬಾಗ್ ಗೆ ಆಗಮಿಸುವ ಪ್ರವಾಸಿಗರು/ ಸಾರ್ವಜನಿಕರು/ ವಾಯುವಿಹಾರಿಗಳ ವಾಹನಗಳನ್ನು ನಿಲುಗಡೆ ಮಾಡಲು ಹಿಂದೆ ಇದ್ದ 5 ಎಕರೆ ಪ್ರದೇಶದ ನಿಲ್ದಾಣ ವ್ಯವಸ್ಥಿತವಾಗಿರಲಿಲ್ಲ ಹಾಗೂ ಪ್ರವಾಸಿಗರಿಗೆ ಪೂರಕವಾದ ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ, ಲೈಟಿಂಗ್ ವ್ಯವಸ್ಥೆಗಳಿರಲಿಲ್ಲ ಇದನ್ನು ಮನಗಂಡು BOSH ಸಂಸ್ಥೆಯ ಸಹಕಾರದಲ್ಲಿ ರೂ.5.00 ಕೋಟಿಗಳ ವೆಚ್ಚದಲ್ಲಿ ಸಾಮಾಜಿಕ ಜವಾಬ್ದಾರಿ ನಿಧಿಯಡಿ (CSR Fund) ಆಧುನಿಕ ವ್ಯವಸ್ಥೆಗಳುಳ್ಳ ಅಂತರರಾಷ್ಟ್ರೀಯ ಮಟ್ಟದ ವಾಹನ ನಿಲ್ದಾಣವನ್ನು |

ವೈಜ್ಞಾನಿಕವಾಗಿ ಅಭಿವೃದ್ಧಿಪಡಿಸಲಾಗಿದೆ. ಹೊಸ ವಾಹನ ನಿಲ್ದಾಣದ ವಿಶೇಷಗಳು ಇಂತಿವೆ.

1) 5 ಎಕರೆ ಪ್ರದೇಶಕ್ಕೆ ವ್ಯವಸ್ಥಿತ ಡ್ರೈನೇಜ್ ಸಿಸ್ಟಂ ಅಳವಡಿಸಲಾಗಿದೆ. ರಸ್ತೆ ಮತ್ತು ನಿಲ್ದಾಣ ಪ್ರದೇಶಕ್ಕೆ ಡಾಂಬರೀಕರಣ ಮಾಡಲಾಗಿದೆ.
2) 4 ಚಕ್ರ ಮತ್ತು ದ್ವಿ ಚಕ್ರ ವಾಹನಗಳಿಗೆ ಪ್ರತ್ಯೇಕ ನಿಲ್ದಾಣ ಪ್ರದೇಶವನ್ನು ಕಾಬೂಲ್ ಸ್ಟೋನ್ ಪ್ಲಾಟ್ ಫಾರಂನಿಂದ ನಿರ್ಮಿಸಿ, ಗುರುತಿಸಲಾಗಿದೆ.
3) ಇಡೀ ವಾಹನ ನಿಲ್ದಾಣ ಪ್ರದೇಶಕ್ಕೆ ಹೊಸದಾಗಿ ಲೈಟಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ.
4) ನಿಲ್ದಾಣದ ಎಲ್ಲಾ ಲೈಟಿಂಗ್ ವ್ಯವಸ್ಥೆಯು ಸೋಲಾರ್ ಸಿಸ್ಟಂ ಅಡಿ ರನ್ ಆಗುತ್ತಿದ್ದು, ಪರಿಸರ ಸ್ನೇಹಿಯಾಗಿದೆ ಹಾಗೂ ಲಾಲ್ ಬಾಗ್ ನ ವಿದ್ಯುತ್ ವೆಚ್ಚ ತಗ್ಗಿಸಲು ಸಹಾಯಕಾರಿಯಾಗಿದೆ.
5) 2 ಕುಡಿಯುವ ನೀರಿನ ಘಟಕಗಳನ್ನು ನಿರ್ಮಿಸಲಾಗಿದೆ. (ಇಲಾಖೆ ವತಿಯಿಂದ ಕೈಗೊಳ್ಳಲಾಗಿದೆ)
6) 1 ಸುಸಜ್ಜಿತ ಶೌಚಾಲಯವನ್ನು ನಿರ್ಮಿಸಲಾಗಿದೆ. (ಇಲಾಖೆ ವತಿಯಿಂದ ಕೈಗೊಳ್ಳಲಾಗಿದೆ)
7) ಹಿಂದೆ ನಿಲ್ದಾಣ ಪ್ರದೇಶ ಯಾವುದೇ ಗಿಡ-ಮರಗಳಿಲ್ಲದೆ ಬರಡಾಗಿತ್ತು. ಪ್ರಸ್ತುತ ಕೆಳಕಂಡ ಹೊಸ ಸಸ್ಯ ಪ್ರಭೇದಗಳಿಗೆ ಸೇರುವ 400 ಕ್ಕೂ ಹೆಚ್ಚು ಗಿಡ-ಮರಗಳನ್ನು ಈ ಪ್ರದೇಶದಲ್ಲಿ ಬೆಳಸಲಾಗಿದೆ. ಇದು ವಾಹನ ನಿಲುಗಡೆಗೆ ನೆರಳು ಒದಗಿಸುವುದರ ಜೊತೆಗೆ ಹಿಂದೆ ಬರಡಾಗಿದ್ದ ಪ್ರದೇಶವನ್ನು ಹಸಿರಾಗಿಸಿದೆ.
   i. ಅಂಡಮಾನ್ ಪಿಪ್ಪೆಟ್ಟಾ ಮರಗಳು
   ii. ಬಿಕ್ಷುಕನ ಬಕರೆ ಗಿಡಗಳು (ಕ್ರಿಸೆನ್ಸಿಯಾ ಕುಜೆಟೆ)
   iii. ಟರ್ಮಿನೇಲಿಯಾ ಮೆಂಟಾಲಿ (ಟಯರ್ ಪ್ಲಾಂಟ್)
   iv. ಮಹಾಘನಿ
   v. ಟಬೂಬಿಯಾ ಪ್ರಭೇದ
   vi. ಪೆಂಡಾನಸ್ ಇತ್ಯಾದಿ.
8) ಪ್ರಸ್ತುತ 40 ಕ್ಕೂ ಹೆಚ್ಚು ಬಸ್ಸುಗಳು, 250 ಕ್ಕೂ ಹೆಚ್ಚು 4 ಚಕ್ರ ವಾಹನಗಳು ಮತ್ತು 1500 ಕ್ಕೂ ಹೆಚ್ಚು ದ್ವಿ ಚಕ್ರ ವಾಹನಗಳನ್ನು ಏಕ ಕಾಲದಲ್ಲಿ ನಿಲುಗಡೆ ಮಾಡಬಹುದಾಗಿದೆ.

| | | |
|---|---|---|
| | | 9) ನಿಲ್ದಾಣ ಪ್ರದೇಶಲ್ಲಿ ಕೂರು ಬೆಂಚುಗಳು ಮತ್ತು 15 ಕ್ಕೂ ಹೆಚ್ಚು ಡಸ್ಟ್ ಬಿನ್ಸ್ ಗಳನ್ನು ಸಹಾ ಅಳವಡಿಸಲಾಗಿದೆ. |
| 11 | ಪರಿಸರ ಸ್ನೇಹಿ ನಡಿಗೆ ಪಾತ್ ಅಭಿವೃದ್ಧಿ | ಲಾಲ್ ಬಾಗ್ ಗೆ ಭೇಟಿ ನೀಡುವ ಪ್ರವಾಸಿಗರು, ಜನಸಾಮಾನ್ಯರು ಮತ್ತು ವಾಯುವಿಹಾರಿಗಳು ಹಿಂದೆ ಲಾಲ್ ಬಾಗ್ ನ ಒಳಾಂಗಣ ರಸ್ತೆಗಳಲ್ಲಿ ಮಾತ್ರ ಸಂಚರಿಸಿ ಲಾಲ್ ಬಾಗ್ ನ ಸವಿಯನ್ನು ಸವಿಯ ಬೇಕಿತ್ತು, ಇದರಿಂದ ಸಸ್ಯತೋಟದ ಮೇಲೆ ಹೆಚ್ಚು ಒತ್ತಡ ನಿರ್ಮಾಣವಾಗಿ ಅಲ್ಲಲ್ಲಿ ಹೆಚ್ಚು ಕಾಲುದಾರಿಗಳು ಗೋಚರಿಸತೊಡಗಿದವು. ಹಾಗೆಯೇ ಕೆಲವು ಕಡೆ ಕಾಂಪೌಂಡ್ ಬಳಿಗೆ ತೆರಳಲು ಸಾಧ್ಯವಾಗದಷ್ಟು ಕಾಡಿನ ಗಿಡಗಳು, ಪೊದೆಗಳು ಬೆಳೆದಿದ್ದವು. ಇವುಗಳಿಗೆಲ್ಲವೂ ಪರಿಹಾರ ಕಂಡು ಹಿಡಿಯಲು ಹಾಗೂ ಪ್ರವಾಸಿಗರು ಮತ್ತು ವಾಯು ವಿಹಾರಿಗಳಿಗೆ ಹೆಚ್ಚು ಸಹಾಯಕಾರಿಯಾಗುವಂತೆ 2009-10ನೇ ಸಾಲಿನಲ್ಲಿ 12 ಅಡಿ ಅಗಲದ, ಕರ್ಬ್ ವುಳ್ಳ ಹೊಸಕೋಟೆ ಮುರಂನಿಂದ ಕೂಡಿದ 4.5 ಕಿ.ಮೀ ಉದ್ದದ ಪರಿಸರ ಸ್ನೇಹಿ ವಾಕಿಂಗ್ ಪಾಥ್ ವೇ ಅನ್ನು ಲಾಲ್ ಬಾಗ್ ಕಾಂಪೌಂಡ್ ಗೆ ಹೊಂದಿಕೊಂಡಂತೆ ಲಾಲ್ ಬಾಗ್ ನ ನಾಲ್ಕು ದ್ವಾರಗಳನ್ನು ಸಂದರ್ಶಿಸುವ ಹಾಗೆ ಸುತ್ತಳತೆಯಲ್ಲಿ ನಿರ್ಮಿಸಲಾಗಿದೆ. ಪ್ರಸ್ತುತ ಶೇ.40 ರಷ್ಟು ಪ್ರವಾಸಿಗರು ಮತ್ತು ವಾಯುವಿಹಾರಿಗಳು ಈ ಮಾರ್ಗವನ್ನು ಬಳಸುತ್ತಿದ್ದಾರೆ. |
| 12 | ಕ್ರೆಂಬಿಗಲ್ ಹಾಲ್ ಮರು ನಿರ್ಮಾಣ ಕಾರ್ಯ | ಬ್ರಿಟೀಷ್ ಆಳ್ವಿಕೆಯ ಸಮಯದಲ್ಲಿ ನಿರ್ಮಾಣಗೊಂಡು ಆ ನಂತರ 'ಕ್ರೆಂಬಿಗಲ್ ಹಾಲ್' ಎಂದು ನಾಮಕರಣಗೊಂಡಿದ್ದು, ಅಂದಿನ ಮಾಲಿಗಳಿಗೆ ತರಬೇತಿ ನೀಡುತ್ತಿದ್ದ ಕ್ರೆಂಬಿಗಲ್ ಹಾಲ್, ಅತ್ಯಂತ ಶಿಥಿಲಾವಸ್ಥೆಗೆ ತಲುಪಿ ಬಹುಭಾಗವು ಭಾರಿ ಮಳೆಯಿಂದ ಕುಸಿದುಬಿದ್ದ ಹಿನ್ನೆಲೆಯಲ್ಲಿ, ಲಾಲ್ ಬಾಗ್ ಸಲಹಾ ಸಮಿತಿಯ ಪರಿಣಿತರ ಸಲಹೆಯಂತೆ ಐತಿಹಾಸಿಕ ಕಟ್ಟಡಗಳ ಸಂರಕ್ಷಣೆಯ ಜವಾಬ್ದಾರಿ ಹೊತ್ತಿರುವ ಪ್ರಾಚ್ಯವಸ್ತು ಮತ್ತು ಪಾರಂಪಾರಿಕ ಇಲಾಖೆಯ ಪರಿಣಿತರ ತಾಂತ್ರಿಕ ಸಲಹೆ ಮತ್ತು ಮಾರ್ಗದರ್ಶನದಂತೆ ರೂ.1.0 ಕೋಟಿಗಳ ವೆಚ್ಚದಲ್ಲಿ ಕ್ರೆಂಬಿಗಲ್ ಹಾಲ್ ಅನ್ನು ಮೂಲ ರೂಪ ಮತ್ತು ಮಾದರಿಯಲ್ಲಿಯೇ ಪ್ರಾಚ್ಯವಸ್ತು ಮತ್ತು ಪರಂಪರೆ ಇಲಾಖೆ ವತಿಯಿಂದ ಪುನರ್ ನಿರ್ಮಿಸಲಾಗಿದೆ. ಇದರಲ್ಲಿ 100 ಜನರು ಕೂರುವ ಆಸನದ ವ್ಯವಸ್ಥೆ ಇರುತ್ತದೆ.<br>ಪ್ರಸ್ತುತ ಯುನೈಟೆಡ್ ವೇ ಸಂಸ್ಥೆಯ CSR ಸಹಕಾರದಲ್ಲಿ ರೂ.65.00 ಲಕ್ಷಗಳ ವೆಚ್ಚದಲ್ಲಿ ಹಾಲ್ ನ ಇಂಡೋರ್ ಥಿಯೇಟರ್ ಪರಿಕಲ್ಪನಾ ಕಾರ್ಯಗಳು ಸಕಾರಗೊಳ್ಳುತ್ತಿದ್ದು, ಲಾಲ್ ಬಾಗ್ ನ ಉಗಮ, ಇತಿಹಾಸ, ಬೆಳವಣಿಗೆ, ಸಸ್ಯಪ್ರಭೇದಗಳ ಬಗೆಗಿನ ಮಾಹಿತಿ, ಫಲಪುಷ್ಪ |

| | | |
|---|---|---|
| | | ಪ್ರದರ್ಶನಗಳು, ಐತಿಹಾಸಿಕ ಕ್ಷಣಗಳನ್ನು ನೆನಪಿಸುವ ಬಗೆಗಿನ ಪ್ರತ್ಯೇಕ ಡಾಕ್ಯೂಮೆಂಟರಿಯೂ ಸಹಾ ಸಿದ್ಧಗೊಳ್ಳುತ್ತಿದೆ.<br>ವಿದೇಶಗಳಲ್ಲಿನ ಪ್ರತಿಷ್ಠಿತ ಸಸ್ಯತೋಟಗಳಲ್ಲಿರುವಂತೆ ಮುಂದೆ ಇದನ್ನು ವರ್ಚುಯಲ್ ಮ್ಯೂಸಿಯಂ ಆನ್ನಾಗಿ ಪರಿವರ್ತಿಸಿ, ಲಾಲ್ ಬಾಗ್ ಅನ್ನು ಸಂದರ್ಶಿಸುವ ಪ್ರವಾಸಿಗರಿಗೆ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಲಾಲ್ ಬಾಗ್ ಬಗೆಗಿನ ಸಾಕ್ಷ್ಯಚಿತ್ರವನ್ನು ವೀಕ್ಷಿಸುವ ಅವಕಾಶವನ್ನು ಕಲ್ಪಿಸಲಾಗುವುದು. ಇದರಿಂದ ಲಾಲ್ ಬಾಗ್ ಗೆ ಆದಾಯವು ಸಹಾ ಲಭಿಸಲಿದೆ. |
| 13 | ಡಾ: ಎಂ.ಹೆಚ್. ಮರೀಗೌಡ ರಾಷ್ಟ್ರೀಯ ತೋಟಗಾರಿಕೆ ಗ್ರಂಥಾಲಯ ಮತ್ತು ವಸ್ತು ಸಂಗ್ರಹಾಲಯದ ಸಂರಕ್ಷಣೆ | ಲಾಲ್ ಬಾಗ್ ಮುಖ್ಯದ್ವಾರದ ಬಳಿ ಇರುವ ಬ್ರಿಟೀಷ್ ಆಳ್ವಿಕೆಯ ಸಂದರ್ಭದಲ್ಲಿ ಲಾಲ್ ಬಾಗ್ "ಸಸ್ಯಶಾಸ್ತ್ರೀಯ ತೋಟ" ದ (Botanical Garden) ಸ್ಥಾನಮಾನ ಪಡೆದ ಕಾಲಘಟ್ಟದಲ್ಲಿ ನಿರ್ಮಿತವಾದ 150 ವರ್ಷಕ್ಕೂ ಹಳೆಯದಾದ ಈ ಪುರಾತನ ಕಟ್ಟಡ ಮೂಲತಃ ಐತಿಹಾಸಿಕ ಗಾಜಿನ ಮನೆಯನ್ನು ನಿರ್ಮಿಸಿದ ಜಾನ್ ಕೆಮರಾನ್, ಜಿ.ಹೆಚ್.ಕ್ರಂಬಿಗಲ್, ಬ್ರಿಟೀಷ್ ಆಳ್ವಿಕೆಯು ಕೊನೆಗೊಂಡ ನಂತರ ನಮ್ಮ ರಾಜ್ಯದ ಮೊದಲ ಅಧಿಕಾರಿಗಳಾದ ರಾವ್ ಬಹದ್ದೂರ್, H.C.ಜವರಾಯ ಹಾಗೂ ತೋಟಗಾರಿಕೆ ಪಿತಾಮಹ ಡಾ: ಎಂ.ಹೆಚ್.ಮರೀಗೌಡರು ವಾಸವಿದ್ದ ಅಧಿಕೃತ ಸರ್ಕಾರಿ ನಿವಾಸವಾಗಿತ್ತು.<br>ಡಾ: ಎಂ.ಹೆಚ್.ಮರೀಗೌಡರರು ಇಲ್ಲಿಯೇ ವಾಸವಿದ್ದ ಕೊನೆಯ ಅಧಿಕಾರಿ, ಇವರ ನಿವೃತ್ತಿಯ ನಂತರ ಮರೀಗೌಡರ ಹೆಬ್ಬಯಕೆಯಂತೆ ಶೇ.60 ರಷ್ಟು ನಿವಾಸದ ಭಾಗವನ್ನು ಅಂದಿನ ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ರಾಮಕೃಷ್ಣ ಹೆಗ್ಗಡೆಯವರ ಕಾಲಘಟ್ಟದಲ್ಲಿ ಮರೀಗೌಡರ ಸಮ್ಮುಖದಲ್ಲಿ ದಿನಾಂಕ: 18-01-1988 ತೋಟಗಾರಿಕೆ ಗ್ರಂಥಾಲಯವನ್ನು ಸ್ಥಾಪಿಸಿ **"ಡಾ: ಎಂ.ಹೆಚ್.ಮರೀಗೌಡ ರಾಷ್ಟ್ರೀಯ ತೋಟಗಾರಿಕೆ ಗ್ರಂಥಾಲಯ"** ಎಂದು ಹೆಸರಿಸಲಾಯಿತು. ಉಳಿದ ಶೇ.40 ರಷ್ಟು ನಿವಾಸದ ಭಾಗವು ಇಂದಿಗೂ ತೋಟಗಾರಿಕೆ ನಿರ್ದೇಶಕರ ಅಧಿಕೃತ ಸರ್ಕಾರಿ ನಿವಾಸವಾಗಿದೆ.<br>ಇಂತಹ ಇತಿಹಾಸವುಳ್ಳ ಪುರಾತನ ಕಟ್ಟಡವು ಶಿಥಿಲಾವಸ್ಥೆಗೆ ತಲುಪಿದಾಗ ತೋಟಗಾರಿಕೆ ಇಲಾಖೆಯು ಅತ್ಯಂತ ಆಸಕ್ತಿವಹಿಸಿ, ಇದರ ಸಂರಕ್ಷಣೆಗೆ ಮುಂದಾಯಿತು. ರಾಜ್ಯ ಹಾಗೂ ರಾಷ್ಟ್ರಮಟ್ಟದ ಪರಿಣಿತರ ಸಲಹೆ ಮತ್ತು ಮಾರ್ಗದರ್ಶನವನ್ನು ಪಡೆದು ರಾಜ್ಯ ಪ್ರಾಚ್ಯವಸ್ತು ಮತ್ತು ಪರಂಪರೆ ಇಲಾಖೆಗೆ ರೂ.1.0 ಕೋಟಿಗಳ ಮೊತ್ತವನ್ನು ಠೇವಣಿ ಇಟ್ಟು ಕಟ್ಟಡದ ಸಂಪೂರ್ಣ |

| | | |
|---|---|---|
| | | ಸಂರಕ್ಷಣೆಯನ್ನು 2020-21 ರ ಅವಧಿಯಲ್ಲಿ ಕೈಗೊಳ್ಳಲಾಯಿತು.<br>ನಂತರ ಒಂದು ಸುಸಜ್ಜಿತ ಗ್ರಂಥಾಲಯ, E-Library ಹಾಗೂ ವಸ್ತುಸಂಗ್ರಹಾಲಯವನ್ನಾಗಿಸಲು ಪರಿಣಿತರ ಸಲಹೆಗಳನ್ನು ಪಡೆದು ಅವಶ್ಯ Interior ಕಾರ್ಯಗಳನ್ನು ಸಹಾ ಕೈಗೊಳ್ಳಲಾಗಿದೆ. ಹಾಲಿ ನುರಿತ ಗ್ರಂಥಪಾಲಕರ ಸೇವೆಯನ್ನು ಪಡೆಯಲು ಕ್ರಮವಹಿಸಲಾಗಿದ್ದು, ಆದ್ಯತೆ ಮೇರೆಗೆ ಗ್ರಂಥಾಲಯ ಮತ್ತು ವಸ್ತುಸಂಗ್ರಹಾಲಯದ ಕಾರ್ಯವನ್ನು ಪೂರ್ಣಗೊಳಿಸಲಾಗುವುದು. |
| 14 | ಬೋನ್ಸಾಯ್ ಗಾರ್ಡನ್ನಿನ ಉನ್ನತೀಕರಣ: | ಲಾಲ್ ಬಾಗ್ ನ ಜೋಡಿ ರಸ್ತೆಯು ಬಳಿ ಇರುವ ಬೋನ್ಸಾಯ್ ಗಾರ್ಡನ್ ಅನ್ನು ಒಟ್ಟಾರೆ ಉನ್ನತೀಕರಿಸಲು ಬೋನ್ಸಾಯ್ ಪರಿಣಿತರ ಸಲಹೆ ಮತ್ತು ಸೇವೆಯನ್ನು ಪಡೆದು ಈ ಕಾರ್ಯವನ್ನು ಸಾಕಾರಗೊಳಿಸಲಾಗುತ್ತಿದೆ. ಈ ಸಂಬಂಧ ಪ್ರಸ್ತುತ ಕೆಳಕಂಡ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ.<br>1. ಬೋನ್ಸಾಯ್ ಗಾರ್ಡನ್ನಿನ ಉನ್ನತೀಕರಣಕ್ಕೆ 2022ನೇ ಸಾಲಿನಲ್ಲಿ ಪ್ರತ್ಯೇಕವಾಗಿ ರೂ.45.00 ಲಕ್ಷಗಳ ಅನುದಾನವನ್ನು ನೀಡಲಾಗಿದೆ.<br>2. ಹಾಲಿ ಇದ್ದ ಓಪನ್ ಏರ್ ಆ್ಯಂಪಿಥಿಯೇಟರ್ ಪ್ರದೇಶಕ್ಕೆ ಹೊಸದಾಗಿ 4 Stone Lanterns ಗಳನ್ನು ಅಳವಡಿಸಲಾಗಿದೆ. ಒಳಾಂಗಣದ ಪ್ರವೇಶ ದ್ವಾರಗಳಲ್ಲಿ ಆಕರ್ಷಕವಾದ 4 ಮರದ ಪಗೋಡ ಮಾದರಿ ಮರ ನಿರ್ಮಿತ ಕಮಾನುಗಳನ್ನು ನಿರ್ಮಿಸಲಾಗಿದೆ.<br>3. ಹಾಲಿ ಇರುವ ಬೋನ್ಸಾಯ್ ಗಿಡಗಳ ಸದೃಡ ಅಭಿವೃದ್ಧಿ ಮತ್ತು ಬೆಳವಣಿಗೆಗೆ ಒತ್ತು ನೀಡಲಾಗಿದೆ.<br>4. ನೀರಿನ ಕೊಳವನ್ನು ಸುಂದರೀಕರಿಸಲಾಗುತ್ತಿದೆ.<br>5. ಮುಖ್ಯ ಬೋನ್ಸಾಯ್ ಪ್ರದರ್ಶನದ ಸ್ಥಳದಲ್ಲಿ ಹೊಸದಾಗಿ ಬೋನ್ಸಾಯ್ ಸ್ಟ್ಯಾಂಡ್ ಗಳನ್ನು ಅಳವಡಿಸಲಾಗುತ್ತಿದೆ. ಜೆನ್ ಕಾನ್ಸೆಪ್ಟ್ ಗೆ ಹೊಂದುವಂತೆ ಕಲ್ಲಿನ ಪೆಬಲ್ಸ್ ಬಳಕೆ ಮಾಡಿ ಸೂಕ್ತ ಭೂದೃಶ್ಯ ವೇದಿಕೆ ಸಿದ್ದಪಡಿಸಲಾಗುತ್ತಿದೆ.<br>6. ಬೃಹತ್ ಗಾತ್ರದ ಆಕರ್ಷಕ ಬೋನ್ಸಾಯ್ ಗಿಡಗಳನ್ನು ಹೊಸದಾಗಿ ಪರಿಚಯಿಸಲಾಗುತ್ತಿದೆ.<br>7. ಬೋನ್ಸಾಯ್ ಗೆ ಅಗತ್ಯವಾದ ಕಂಟೈನರ್ಸ್ ಗಳನ್ನು ದೆಹಲಿಯ ಪರಿಣಿತರಿಂದ ತರಲಾಗಿದೆ.<br>8. ಫೆನ್ಸಿಂಗ್ ಬೋನ್ಸಾಯ್ ಕಲೆಯಲ್ಲಿ ಗಿನ್ನೀಸ್ ದಾಖಲೆ ಪಡೆದಿರುವ ಬೋನ್ಸಾಯ್ ಪರಿಣಿತ ದೆಹಲಿಯ ಶ್ರೀ ಮನೋಜ್ ಹಾಗೂ ಲಂಡನ್ನಿನ ಕ್ಯೂ |

| | | |
|---|---|---|
| | | ಗಾರ್ಡನ್ನಿನ ಪರಿಣಿತರು ನಮ್ಮ ರಾಜ್ಯದವರೇ ಆದ ಬೋನ್ಸಾಯ್ ನಲ್ಲಿ ಅಂತರ ರಾಷ್ಟ್ರೀಯ ಖ್ಯಾತಿ ಪಡೆದ ಶ್ರೀಮತಿ ಅನುಪಮ ವೇದಾಚಲಾ ರವರ ಮಾರ್ಗದರ್ಶನ ಮತ್ತು ಸಹಕಾರದಲ್ಲಿ ಬೃಹತ್ ಗಾತ್ರದ ಹೊಸ ಬೋನ್ಸಾಯ್ ವಿನ್ಯಾಸಗಳನ್ನು ಸಿದ್ಧಗೊಳಿಸುತ್ತಿದ್ದಾರೆ.<br>9. ಬೋನ್ಸಾಯ್ ಗಾರ್ಡನ್ನಿನ ಪಗೋಡಾ ಗೇಟ್ ನ ಸಂರಕ್ಷಣೆ ಮಾಡಿ, ವಿದ್ಯುದೀಕರಣ ಮತ್ತು ಹೊಸದಾಗಿ ಬಣ್ಣಲೇಪನ ಕಾರ್ಯವನ್ನು ಕೈಗೊಳ್ಳಲಾಗಿರುತ್ತದೆ.<br>10. ಮುಂದಿನ 4-5 ತಿಂಗಳುಗಳ ಅವಧಿಯಲ್ಲಿ ಬೋನ್ಸಾಯ್ ಉದ್ಯಾನವನವನ್ನು ಪೂರ್ಣ ಪ್ರಮಾಣದಲ್ಲಿ ಉನ್ನತೀಕರಿಸಲಾಗುವುದು. |
| 15 | 100 ವರ್ಷಗಳಿಗೂ ಹಳೆಯ ಜೈವಿಕ ಪೇಟಿಂಗ್ಸ್ ಗಳ ಸಂರಕ್ಷಣೆ | ಜಾನ್ ಕೆಮರಾನ್ ಕಾಲಾವಧಿಯಲ್ಲಿ ಚಲುವಯ್ಯರಾಜು ಎಂಬ ಖ್ಯಾತ ಕಲಾವಿದನಿಂದ Vegetable colors ಗಳಿಂದ ರೂಪಗೊಂಡಿರುವ 750 ಕ್ಕೂ ಹೆಚ್ಚು ಅಮೂಲ್ಯವಾದ Botanical Paintings ಗಳನ್ನು ಚಿತ್ರಕಲಾ ಪರಿಷತ್ ಮತ್ತು ಇತರೇ ಪರಿಣಿತರ ಸಹಕಾರದಲ್ಲಿ ವೈಜ್ಞಾನಿಕವಾಗಿ ಸಂರಕ್ಷಿಸಲಾಗಿದೆ. ಇತ್ತೀಚೆಗೆ ಸಂರಕ್ಷಣೆಗೊಂಡಿರುವ ಲಾಲ್ ಬಾಗ್ ಗ್ರಂಥಾಲಯದಲ್ಲಿ ಜೈವಿಕ ಪೈಂಟಿಂಗ್ಸ್ ಗಳನ್ನು ಮತ್ತಷ್ಟು ಸುರಕ್ಷಿತವಾಗಿ ಸಂರಕ್ಷಿಸಿಡಲು ಅನುವಾಗುವಂತೆ ವೈಜ್ಞಾನಿಕವಾಗಿ ಪ್ರತ್ಯೇಕ ಸಂಗ್ರಹಣಾ ವ್ಯವಸ್ಥೆಯನ್ನು ಸಹಾ ಕಲ್ಪಿಸಲಾಗಿದೆ. ಜೊತೆಗೆ ಹೊಸದಾಗಿ ನವೀಕರಣಗೊಂಡಿರುವ ಗ್ರಂಥಾಲಯ ಮತ್ತು ವಸ್ತು ಸಂಗ್ರಹಾಲಯದ ಒಂದು ಪ್ರತ್ಯೇಖ ವಿಭಾಗದಲ್ಲಿ ಆಯ್ದ ಸಸ್ಯಶಾಸ್ತ್ರೀಯ ಜೈವಿಕ ಪೈಂಟಿಗ್ಸ್ ಗಳ ಪ್ರದರ್ಶನದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. |
| 16 | ಪರಿಸರ ಸ್ನೇಹಿ ವಾಹನಗಳ ಸೇವೆ | ಲಾಲ್ ಬಾಗ್ ಅನ್ನು ಸಂದರ್ಶಿಸುವ ಪ್ರವಾಸಿಗರ ಬಳಕೆ ಮತ್ತು ಲಾಲ್ ಬಾಗ್ ನ ಪರಿಸರವನ್ನು ಪರಿಸರ ಪೂರಕವಾಗಿಸಲು ಅನುವಾಗುವಂತೆ 4 ಇಕೋ ವಾಹನಗಳ ಸೇವೆಯನ್ನು ಪಡೆಯಲಾಗಿದೆ.<br>ಆದರಲ್ಲಿಯೂ ವಿಶೇಷವಾಗಿ ವೃದ್ಧರು, ಅಂಗವಿಕಲರು ಮತ್ತು ಮಕ್ಕಳಿಗೆ ಇದು ಹೆಚ್ಚು ಪ್ರಯೋಜನವಾಗುತ್ತಿದೆ. ಜೊತೆಗೆ ವಾರ್ಷಿಕ ರೂ.28.80 ಲಕ್ಷಗಳ ಆದಾಯವೂ ಕೂಡ ಲಾಲ್ ಬಾಗ್ ಗೆ ಲಭಿಸುತ್ತಿದೆ. |
| 17 | ಹೊಸ ಸಸ್ಯ ಪ್ರಭೇದಗಳ ಪರಿಚಯ | ದೇಶ ವಿದೇಶಿ ಸಸ್ಯ ಪ್ರಭೇದಗಳ ಪರಿಚಯ, ಅವುಗಳ ಸಂರಕ್ಷಣೆ ಮತ್ತು ಸಸ್ಯಾಭಿವೃದ್ಧಿಯು ಸಸ್ಯಶಾಸ್ತ್ರೀಯ ತೋಟಗಳ ಮೂಲ ಉದ್ದೇಶವಾಗಿರುತ್ತದೆ. ಈ ನಿಟ್ಟಿನಲ್ಲಿ ಹಿಂದಿನಿಂದಲೂ ಪಾಲಿಸಿಕೊಂಡು ಬಂದಿರುವ ಪರಂಪರೆಯನ್ನು ಮುಂದುವರೆಸಲಾಗಿದೆ. ಲಾಲ್ ಬಾಗ್ ನಲ್ಲಿದ್ದ 1650 ಸಸ್ಯ ಪ್ರಭೇದಗಳ ಪಟ್ಟಿಗೆ |

| | | |
|---|---|---|
| | | ಹೊಸದಾಗಿ 250 ಕ್ಕೂ ಹೆಚ್ಚು ದೇಶ-ವಿದೇಶಿ ಸಸ್ಯ ಪ್ರಭೇದಗಳನ್ನು ಪರಿಚಯಿಸಲಾಗಿದೆ. ಹಾಗೂ ಈ ಪ್ರಕ್ರಿಯೇ ಮುಂದೆಯೂ ನಿರಂತರವಾಗಿ ಮುಂದುವರೆಯಲಿದೆ. |
| 18 | ಅವಶ್ಯ ಶೌಚಾಲಯಗಳ ನಿರ್ಮಾಣ | ಮೂಲತಃ ಲಾಲ್ ಬಾಗ್ ಗಾಜಿನ ಮನೆಯ ಬಳಿ ಒಂದೇ ಒಂದು ಶೌಚಾಲಯವಿತ್ತು. ತದನಂತರ ಪ್ರವಾಸಿಗರು ಮತ್ತು ವಾಯುವಿಹಾರಿಗಳ ಅನುಕೂಲಕ್ಕಾಗಿ 5 ಹೆಚ್ಚುವರಿ ಶೌಚಾಲಯಗಳನ್ನು ಹಂತ ಹಂತವಾಗಿ ನಿರ್ಮಿಸಲಾಯಿತು. ಅವುಗಳ ವಿವರಗಳು ಇಂತಿವೆ. |

| | |
|---|---|
| 1. ಲಾಲ್ ಬಾಗ್ ಸಿದ್ದಾಪುರ ಗೇಟ್ ಬಳಿಯ ಶೌಚಾಲಯವನ್ನು GNR ಸಂಸ್ಥೆಯ CSR ನಿಧಿಯ ಸಹಕಾರದಲ್ಲಿ 2007 ರಲ್ಲಿ ನಿರ್ಮಿಸಲಾಯಿತು. | Siddapura gate toilet photo |
| 2. 2009 ರಲ್ಲಿ ಲಾಲ್ ಬಾಗ್ ವೆಸ್ಟ್ ಗೇಟ್ ಮತ್ತು ಲಾಲ್ ಬಾಗ್ ಮುಖ್ಯದ್ವಾರದ ಬಳಿಗಾದಂತೆ 2 ಶೌಚಾಲಯಗಳನ್ನು ಹೆಚ್ಚುವರಿಯಾಗಿ ನಿರ್ಮಿಸಲಾಯಿತು. | West gate toilet photo<br><br>Main gate toilet photo |
| 3. 2010 ರಲ್ಲಿ ಲಾಲ್ ಬಾಗ್ ಪಾರ್ಕಿಂಗ್ ಸ್ಥಳದಲ್ಲಿ ಹೊಸದಾಗಿ 1 ಶೌಚಾಲಯವನ್ನು ನಿರ್ಮಿಸಲಾಯಿತು. | Parking toilet photo |
| 4. ಗಾಜಿನಮನೆಯ ಬಳಿ ಇರುವ ಹಳೆಯ ಶೌಚಾಲಯದ ಪಕ್ಕದಲ್ಲಿ ಆಧುನಿಕ ಶೈಲಿಯಲ್ಲಿ PES ವಿದ್ಯಾಸಂಸ್ಥೆಯ CSR ಸಹಕಾರದಲ್ಲಿ ಮತ್ತೊಂದು ಆಧುನಿಕ ಶೈಲಿಯ ಹೊಸ | PES Toilet near class house photo |

| | | | |
|---|---|---|---|
| | | ಶೌಚಾಲಯವನ್ನು 2018 ರ ಅವಧಿಯಲ್ಲಿ ನಿರ್ಮಿಸಲಾಯಿತು. | |
| | | 5. ಪ್ರಸ್ತುತ ಲಾಲ್ ಬಾಗ್ ನ 3 ದ್ವಾರಗಳಲ್ಲಿ 3, ವಾಹನ ನಿಲ್ದಾಣ ಪ್ರದೇಶದಲ್ಲಿ 1, ಹಾಗೂ ಗಾಜಿನ ಮನೆಯ ಹತ್ತಿರ 2 ಶೌಚಾಲಯಗಳು ಸೇರಿ ಲಾಲ್ ಬಾಗ್ ವ್ಯಾಪ್ತಿಯಲ್ಲಿ 6 ಶೌಚಾಲಯಗಳಿರುತ್ತವೆ. | |
| 19 | ಪ್ರವಾಸಿಗರು / ವಾಯುವಿಹಾರಿಗಳ ಅನುಕೂಲಕ್ಕಾಗಿ ಪ್ರಥಮ ಚಿಕಿತ್ಸಾ ಕೇಂದ್ರದ ಸ್ಥಾಪನೆ: | ದಿನವಹಿ ಲಾಲ್ ಬಾಗ್ ಅನ್ನು ಸಂದರ್ಶಿಸುವ ಪ್ರವಾಸಿಗರು ಮತ್ತು ವಾಯುವಿಹಾರಿಗಳಿಗೆ ಯಾವುದೇ ತೆರನಾದ ತೊಂದರೆಗೊಳಗಾದಾಗ ತಕ್ಷಣ ಪ್ರಥಮ ಚಿಕಿತ್ಸೆ ನೀಡಿ ಹತ್ತಿರದ ಆಸ್ಪತ್ರೆಗೆ ಕರೆದೊಯ್ಯಲು ಅನುಕೂಲವಾಗುವಂತೆ ಲಾಲ್ ಬಾಗ್ ನ ತೋಟಗಾರಿಕೆ ಉಪ ನಿರ್ದೇಶಕರ ಕಛೇರಿ ಹತ್ತಿರದಲ್ಲಿ ಒಂದು ಸುಸಜ್ಜಿತ ಪ್ರಥಮ ಚಿಕಿತ್ಸಾ ಕೇಂದ್ರವನ್ನು ಸ್ಥಾಪಿಸಲಾಗಿದೆ. ನುರಿತ ನರ್ಸ್ ಒಬ್ಬರು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. | |
| 20 | ವೈಜ್ಞಾನಿಕ ಟ್ರೀ ಸರ್ಜರಿ ಕಾರ್ಯಕ್ಕೆ ಚಾಲನೆ | ಲಾಲ್ ಬಾಗ್ ನಲ್ಲಿ ನೂರಾರು ವರ್ಷಗಳ ಸಾವಿರಾರು ಅಪರೂಪದ ಗಿಡ, ಮರ, ಬೃಹತ್ ವೃಕ್ಷಗಳಿವೆ. ಸಾಮಾನ್ಯವಾಗಿ ಪೂರ್ಣ ವಯಸ್ಸಾದ ಮರಗಳು ಸ್ವಾಭಾವಿಕವಾಗಿ ನಾಶವಾಗುತ್ತವೆ. ಆದರೆ ರೋಗಭಾದೆ, ಕೀಟಭಾದೆ, Mechanical damage ಹಾಗೂ Imbalanced tree canopy ಯಿಂದಾಗಿ ಹಲವು ಅಮೂಲ್ಯವಾದ ಮರಗಳನ್ನು ಪ್ರತಿವರ್ಷ ಕಳೆದುಕೊಳ್ಳುತಿದ್ದೆವು. ಇವುಗಳಿಗೆಲ್ಲವೂ ಪರಿಹಾರ ನೀಡಲು ಪ್ರತ್ಯೇಕ ಪರಿಣಿತರ "ಟ್ರೀ ಸರ್ಜರಿ ತಂಡ" (Tree surgery squad) ಅನ್ನು ಖ್ಯಾತ ಪರಿಸರ ತಜ್ಞರಾದ ಡಾ: ಆ.ನ.ಯಲ್ಲಪ್ಪರೆಡ್ಡಿ ರವರ ಅಧ್ಯಕ್ಷತೆಯಲ್ಲಿ, ಇಲಾಖೆಯ ನಿವೃತ್ತ ಅಪರ ನಿರ್ದೇಶಕರಾದ ಡಾ: S.V.ಹಿತ್ತಲಮನಿ ರವರು, ತೋಟಗಾರಿಕೆ ಜಂಟಿ ನಿರ್ದೇಶಕರು (ಉದ್ಯಾನವನಗಳು ಮತ್ತು ತೋಟಗಳು), ಭೂದೃಶ್ಯ ಅಧಿಕಾರಿಗಳು, ತೋಟಗಾರಿಕೆ ಉಪ ನಿರ್ದೇಶಕರು ಲಾಲ್ ಬಾಗ್ ಮತ್ತು ಕಬ್ಬನ್ ಉದ್ಯಾನವನ ಹಾಗೂ ಬಾಹ್ಯ ಟ್ರೀ ಸರ್ಜರಿ ಪರಿಣಿತರನ್ನೊಳಗೊಂಡ ತಂಡವನ್ನು | |

| | | |
|---|---|---|
| | | ರಚಿಸಲಾಗಿದೆ. ಈ ಮೂಲಕ ಕೆಳಕಂಡಂತೆ ಕ್ರಮವಹಿಸಲಾಗುತ್ತಿದೆ.<br>1) ಕೀಟ ಮತ್ತು ರೋಗ ಭಾದೆ ಕಂಡು ಬಂದಾಗ, ಅದರಲ್ಲಿಯೂ ವಿಶೇಷವಾಗಿ ಖಾಂಡ ಕೊರಕ ಹುಳು ಭಾದೆಯು (Stem borer) ಕಂಡುಬಂದಾಗ ಸೂಕ್ತ ರೋಗ ಮತ್ತು ಕೀಟನಾಶಕಗಳನ್ನು ಬಳಸಿ ನಿಯಂತ್ರಿಸಲಾಗುತ್ತಿದೆ.<br>2) ಮರಗಳ ಖಾಂಡಕ್ಕೆ ಹಾನಿಯಾದಾಗ ಹಾನಿಯಾದ ಭಾಗವನ್ನು ವೈಜ್ಞಾನಿಕವಾಗಿ ಸ್ವಚ್ಛಗೊಳಿಸಿ ಮತ್ತೆ ಇದು ಮುಂದುವರೆದು ಟೊಳ್ಳಾಗದಂತೆ ಸೂಕ್ತ ಕೀಟ ಮತ್ತು ಶಿಲೀಂದ್ರನಾಶಕ ಹೆಚ್ಚಿ ಕೋಲ್ಟಾರ್ / ಸಿಮೆಂಟ್ ನಿಂದ ಮುಚ್ಚಲಾಗುತ್ತಿದೆ.<br>3) ಮಳೆಗಾಳಿಗೆ ಬಿದ್ದ ಸಣ್ಣ ಗಿಡ/ಮರಗಳ ಮೇಲ್ಭಾಗವನ್ನು ತಕ್ಷಣ ಕತ್ತರಿಸಿ ಹಾಕಿ ಮತ್ತೆ ಮರ ಚಿಗುರುವಂತೆ ನೋಡಿಕೊಳ್ಳಲಾಗುತ್ತಿದೆ.<br>4) ಮರಗಳಲ್ಲಿನ ಮೇಲ್ಭಾಗ ತುಂಬಿದ ರೆಂಬೆ-ಕೊಂಬೆಗಳ ಚತ್ರಿಯಂತಿರದೆ (Umbrella) ಒಂದೇ ಕಡೆಗೆ ಬೆಳೆದಿದ್ದರೆ ಮರ Imbalance ಆಗಿ ಮಳೆ-ಗಾಳಿಯ ಸಮಯದಲ್ಲಿ ಧರೆಗುರುಳುತ್ತದೆ. ಹಿಂದೆ ಹೀಗೆ ಲಾಲ್ ಬಾಗ್ ನಲ್ಲಿ ವರ್ಷದಲ್ಲಿ ಕನಿಷ್ಠ 8-10 ಅಮೂಲ್ಯವಾದ ಮರಗಳು ನಾಶವಾಗುತ್ತಿದ್ದವು. ಈ ಹಿನ್ನೆಲೆಯಲ್ಲಿ ಇಂತಹ ಮರಗಳನ್ನು ಗುರ್ತಿಸಿ, ಪರಿಣಿತರ ಸಲಹೆಯನ್ನಾಧರಿಸಿ ಟ್ರೀ ಸರ್ಜರಿ ಕಾರ್ಯ ಕೈಗೊಂಡು ಮರದ Imbalance ಭಾಗವನ್ನು ಕತ್ತರಿಸಲಾಗುತ್ತಿದೆ. ಇದರಿಂದ ಮರದ ತಲೆಭಾರ (Head weight) ಕಡಿಮೆಯಾಗಿ ಹೆಚ್ಚು ಮಳೆ-ಗಾಳಿ ಬೀಸಿದಾಗಲು ಮರ ಉರುಳಿ ಬೀಳದೆ ಸದೃಢವಾಗಿರುತ್ತದೆ.<br>5) ಕೆಲವು ಅಮೂಲ್ಯವಾದ ಸಣ್ಣ ಸಸ್ಯ ಪ್ರಭೇದಗಳ ಮೇಲೆ ಸಾಮಾನ್ಯ ಬೃಹತ್ ಮರದ ರೆಂಬೆ-ಕೊಂಬೆಗಳು ಹರಡಿ ಇದರ ಬೆಳವಣಿಗೆಗೆ ಮಾರಕವಾದಂತಹ ಸಂದರ್ಭದಲ್ಲಿ ತಮಿಳುನಾಡಿನ ಪರಿಣಿತ tree surgery ತಂಡವನ್ನು ಕರೆಸಿ ಗಿಡಗಳಿಗೆ ತೊಂದರೆಯಾಗದಂತೆ tree surgery ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ. (ಲಾಲ್ ಬಾಗ್ ನಲ್ಲಿ ಪೈಕಸ್ ಬೆಂಜಮಿನಾ ಹಾಗೂ ಅಡಿನ್ ಸೋನಿಯಾ ಡಿಜಿಟೆಟಾ ಮರದ ಸಂರಕ್ಷಣೆಗೆ ಈ ಕಾರ್ಯವನ್ನು ಕೈಗೊಳ್ಳಲಾಗಿದೆ. |
| 21 | ಸಸ್ಯತೋಟದ ನೈರ್ಮಲ್ಯತೆಗಾಗಿ ವಾಹನಗಳ ಸಂಚಾರ | ಹಿಂದೆ ತೋಟಗಾರಿಕೆ ನಿರ್ದೇಶನಾಲಯವನ್ನು ಸಂದರ್ಶಿಸಲು ಬರುತ್ತಿದ್ದ ಅಧಿಕಾರಿಗಳು/ ರೈತರು/ ರಾಜಕೀಯ ವ್ಯಕ್ತಿಗಳು ಮತ್ತು ಸಾರ್ವಜನಿಕರು ಇಲ್ಲಿನ ಕಛೇರಿಗಳಿಗೆ ನೇರವಾಗಿ ವಾಹನಗಳಲ್ಲಿ ತೆರಳುತ್ತಿದ್ದರು. ಹಾಗೆಯೇ ಇಲಾಖಾ |

| | | |
|---|---|---|
| | ಮತ್ತು ಪ್ರವೇಶದ ನಿರ್ಭಂದ | ವಾಹನಗಳು ಕೂಡ ಸಸ್ಯತೋಟದಲ್ಲಿ ಸಂಚರಿಸುತ್ತಿದ್ದವು. ಜೊತೆಗೆ ಹೊರ ಭಾಗದ ಟ್ರಾಫಿಕ್ ತಪ್ಪಿಸಲು ಲಾಲ್ ಬಾಗ್ ಡಬಲ್ ರೋಡ್ ನಿಂದ ಸಸ್ಯತೋಟದ ಒಳ ಹೊಕ್ಕಿ ವೆಸ್ಟ್ ಗೇಟ್ ಗೆ ದ್ವಿ ಚಕ್ರ ವಾಹನಗಳು ಸಂಚರಿಸುತ್ತಿದ್ದವು ಹಾಗೆಯೇ ಇತರೇ ದ್ವಾರಗಳ ಮುಖೇನವು ಸಹಾ ವಾಹನ ಸಂಚಾರವಿತ್ತು.<br>ಲಾಲ್ ಬಾಗ್ ಸಸ್ಯತೋಟವನ್ನು ವಾಹನ ಮುಕ್ತವಾಗಿಸಿ, ಪರಿಸರ ಸ್ನೇಹಿ ವಾತಾವರಣ ಸೃಷ್ಟಿಸಿ ಪ್ರವಾಸಿಗರು ಮತ್ತು ವಾಯುವಿಹಾರಿಗಳಿಗೆ ನೈರ್ಮಲ್ಯಯುತ ಪರಿಸರ ಸ್ನೇಹಿ ವಾತಾವರಣ ಸೃಷ್ಟಿಸಲು ತೋಟಗಾರಿಕೆ ಇಲಾಖೆಯು ಕೆಳಕಂಡ ಪರಿಣಾಮಕಾರಿ ಕ್ರಮಗಳನ್ನು ತೆಗದುಕೊಂಡಿದೆ.<br>1) ಹಿಂದೆ 2019ರ ವರೆಗೆ ಮೇಲ್ಕಂಡಂತೆ ಸಸ್ಯತೋಟದ ಒಳಾಂಗಣವು ವಾಹನ ಸಂಚಾರದಿಂದ ಮುಕ್ತವಾಗಿರಲಿಲ್ಲ. 2020 ರಿಂದ ಲಾಲ್ ಬಾಗ್ ಅನ್ನು ಸಂದರ್ಶಿಸಲು ಬರುವ ಎಲ್ಲಾ ರೀತಿಯ ವಾಹನಗಳು ಡಬಲ್ ರೋಟ್ ಗೇಟ್ ಮುಖೇನ ಮಾತ್ರ ಪ್ರವೇಶಿಸಿ, ಬಂಡೆ ಬಳಿಯ 5 ಎಕರೆ ನಿಗದಿತ ವಾಹನ ನಿಲ್ದಾಣದಲ್ಲಿ ಮಾತ್ರ ನಿಲುಗಡೆ ಮಾಡಿ ಚೈನ್ ಗೇಟ್ ನಿಂದ ಲಾಲ್ ಬಾಗ್ ಒಳ ಪ್ರವೇಶಿಸಬೇಕು.<br>2) ಲಾಲ್ ಬಾಗ್ ನ ಇತರೇ 3 ದ್ವಾರಗಳಾದ ಮೇನ್ ಗೇಟ್, ವೆಸ್ಟ್ ಗೇಟ್ ಮತ್ತು ಸಿದ್ದಾಪುರಗೇಟ್ ಗಳ ಮುಖೇನ ವಾಹನ ಪ್ರವೇಶಿಸುವುದನ್ನು ಸಂಪೂರ್ಣವಾಗಿ ನಿರ್ಭಂದಿಸಿದೆ.<br>3) ಡಬಲ್ ರೋಡ್ ನ ವಾಹನ ನಿಲ್ದಾಣಕ್ಕೆ ಹೊಂದಿಕೊಂಡ ಬಂಡೆ ಕೆಳಭಾಗದ ಚೈನ್ ಗೇಟ್ ಬಳಿಯಿಂದ ವಾಹನಗಳು ಲಾಲ್ ಬಾಗ್ ನ ಒಳ ಪ್ರವೇಶಿಸುವುದನ್ನು ನಿರ್ಭಂಧಿಸಿದೆ.<br>4) ಇಲಾಖಾ ವಾಹನಗಳ ನಿಲುಗಡೆಗೆ ಪಾರ್ಕಿಂಗ್ ಸ್ಥಳದಲ್ಲಿ ಪರ್ಯಾಯ ವ್ಯವಸ್ಥೆ ಕಲ್ಪಿಸಲು ಕ್ರಮವಹಿಸಲಾಗುತ್ತಿದ್ದು, ಅಲ್ಲಿಯವರೆಗೆ ತಾತ್ಕಾಲಿಕವಾಗಿ ಚೈನ್ ಗೇಟ್ ಪ್ರವೇಶಿಸಿ ಮುಖ್ಯ ಲೆಕ್ಕಾಧಿಕಾರಿಗಳ ಕಛೇರಿ ಬಳಿಯ ಪಾರ್ಕಿಂಗ್ ಸ್ಥಳಕ್ಕೆ ಮಾತ್ರ ತೆರಳಲು ಅವಕಾಶ ಕಲ್ಪಿಸಲಾಗಿದೆ. ತದನಂತರ ಈ ವ್ಯವಸ್ಥೆಯನ್ನು ಸಹಾ ಸ್ಥಗಿತಗೊಳಿಸಲಾಗುವುದು.<br>5) ಲಾಲ್ ಬಾಗ್ ಒಳಾಂಗಣದಲ್ಲಿ ಅವಶ್ಯ ನಿರ್ವಹಣಾ ಕಾರ್ಯಗಳಾದ ಭದ್ರತೆ/ ಸ್ವಚ್ಚತೆ/ ನೀರು/ ವಿದ್ಯುತ್ ನಿರ್ವಹಣೆ/ ಸಸ್ಯತೊಟದ ನಿರ್ವಹಣೆ/ ಪರೀಕ್ಷಣೆಗಾಗಿ ಇಲ್ಲಿನ ಸಿಬ್ಬಂದಿ, ಮೇಲ್ವಿಚಾರಕರು ಮತ್ತು ಅಧಿಕಾರಿಗಳು ಬೈಸಿಕಲ್ಸ್ ಗಳನ್ನು ಬಳಸುತ್ತಾರೆ. ಈ ಉದ್ದೇಶಕ್ಕಾಗಿಯೇ ಲಾಲ್ ಬಾಗ್ |

| | | |
|---|---|---|
| | | ನಲ್ಲಿ ಒಟ್ಟಾರೆ 35 ಬೈಸಿಕಲ್ಸ್ ಗಳನ್ನು ಬಳಸಲಾಗುತ್ತಿದೆ.<br>ಒಟ್ಟಾರೆ ಲಾಲ್ ಬಾಗ್ ಅನ್ನು ವಾಹನ ಮುಕ್ತಗೊಳಿಸಿ ಸರ್ವರಿಗೂ ಸಹಾಯಕಾರಿಯಾಗುವಂತೆ ಸ್ವಚ್ಛಂದ ಪರಿಸರ ಸ್ನೇಹಿ ವಾತಾವರಣ ಸೃಷ್ಟಿಸಲು ತೋಟಗಾರಿಕೆ ಇಲಾಖೆಯು ಮೇಲ್ಕಂಡ ಎಲ್ಲಾ ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಂಡಿದೆ. ಇದಕ್ಕೆ ಪ್ರವಾಸಿಗರು, ಸರ್ವಜನಿಕರು, ನಡಿಗೆದಾರರ ಸಹಕಾರ ಮತ್ತು ತೊಡಗಿಸುವಿಕೆ ಅತ್ಯಂತ ಅವಶ್ಯಕವಾಗಿದೆ. |
| 22 | ಬೀದಿನಾಯಿಗಳ ಸಮಸ್ಯೆ: | ಲಾಲ್ ಬಾಗ್ ಸಸ್ಯತೋಟಕ್ಕೆ ಸಾಕುನಾಯಿಗಳನ್ನು ತರುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿರುತ್ತದೆ. ಆದರೆ ಸಸ್ಯತೋಟಕ್ಕೆ 4 ದ್ವಾರಗಳಿರುವುದರಿಂದ ಕಾಲಾ ನಂತರದಲ್ಲಿ ಬೀದಿನಾಯಿಗಳು ಲಾಲ್ ಬಾಗ್ ಒಳ ಸೇರಿದ್ದು, ಇಲ್ಲಿಯೇ ವಾಸಿಸುತ್ತಿವೆ. ಪ್ರಸ್ತುತ 75-80 ಬೀದಿ ನಾಯಿಗಳಿದ್ದು, ಇವುಗಳನ್ನು ಸಂಪೂರ್ಣವಾಗಿ ಸಸ್ಯತೋಟದಿಂದ ಹೊರ ಹಾಕಲು ಇಲ್ಲವೇ ಸ್ಥಳಾಂತರಿಸಲು ಕಾನೂನಿನಲ್ಲಿ ಮತ್ತು ನ್ಯಾಯಾಲಯದ ತೀರ್ಪುಗಳನ್ವಯ ಅವಕಾಶವಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಬೃಹತ್ ಮಹಾನಗರ ಪಾಲಿಕೆಯ ಪಶುವೈದ್ಯಕೀಯ ವಿಭಾಗದ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಸಹಕಾರದಿಂದ ಕೆಳಕಂಡಂತೆ ಕ್ರಮವಹಿಸಲಾಗುತ್ತಿದೆ.<br>1) ವರ್ಷಕ್ಕೊಮ್ಮೆ ಎಲ್ಲಾ ನಾಯಿಗಳಿಗೂ ಆ್ಯಂಟಿರೇಬಿಸ್ ಲಸಿಕೆ ಹಾಕಿಸಲಾಗುತ್ತಿದೆ.<br>2) ಎಲ್ಲಾ ಹೆಣ್ಣು ನಾಯಿಗಳಿಗೆ ಸಂತಾನ ಶಸ್ತ್ರ ಚಿಕಿತ್ಸೆಯನ್ನು ಕೈಗೊಂಡು ಲಾಲ್ ಬಾಗ್ ಗೆ ವಾಪಸ್ಸು ಬಿಡಲಾಗುತ್ತಿದೆ.<br>3) ಲಾಲ್ ಬಾಗ್ ನಲ್ಲಿರುವ ಬೀದಿ ನಾಯಿಗಳನ್ನು ಬೇರೆಡೆಗೆ ಸ್ಥಳಾಂತರಿಸಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ.<br>4) ತುಂಬಾ ರೋಗಪೀಡಿರ ನಾಯಿಗಳನ್ನು ಮಾತ್ರ ಗುರುತಿಸಿ ಅವುಗಳನ್ನು ಹೊರ ತೆಗೆದುಕೊಂಡು ಹೋಗಲಾಗುತ್ತಿದೆ.<br>5) ಅದೇ ರೀತಿ ತುಂಬಾ ಅಗ್ರೇಸಿವ್ ಆಗಿರುವ ನಾಯಿಗಳನ್ನು ಗುರುತಿಸಿ, ಆ್ಯಂಟಿಅಗ್ರೆಸೀವ್ ಚುಚ್ಚುಮದ್ದನ್ನು ನೀಡಲಾಗುತ್ತಿದೆ. ಒಂದು ವೇಳೆ ಅವುಗಳ ನಿಯಂತ್ರಣಕ್ಕೆ ಬಂದಿಲ್ಲವಾದಲ್ಲಿ ಅಂತಹವುಗಳನ್ನು ಸ್ಥಳಾಂತರಿಸುತ್ತಾರೆ. |

| | | |
|---|---|---|
| | | ಮೇಲ್ಕಂಡ ವಾಸ್ತವಾಂಶಗಳ ಹಿನ್ನೆಲೆಯಲ್ಲಿ ಬೀದಿ ನಾಯಿಗಳ ನಿಯಂತ್ರಣಕ್ಕೆ ತನ್ನದೇ ಆದ ಕಾನೂನು ಚೌಕಟ್ಟಿರುವುದರಿಂದ ಸಾರ್ವಜನಿಕರು ಮತ್ತು ವಾಯು ವಿಹಾರಿಗಳು ಪ್ರಾಣಿ-ಪಕ್ಷಿ ಪರಿಸರದ ಜೊತೆ ಸಹ ಬಾಳ್ವೆಯಿಂದ ಮುನ್ನೆಡೆಯಬೇಕಿದೆ. |
| 23 | ಕುಡಿಯುವ ನೀರಿನ ನಿರ್ವಹಣೆ | ಕುಡಿಯುವ ನೀರಿಗೆ ಸಂಬಂಧಿಸಿದಂತೆ ಈ ರೀತಿ ಅನಿಸಿಕೆಗಳನ್ನು ವ್ಯಕ್ತಪಡಿಸಿರುತ್ತಾರೆ. ಹೆಚ್ಚುವರಿ ಶುದ್ಧ ಕುಡಿಯುವ ನೀರಿನ ಘಟಕಗಳು ಅವಶ್ಯಕತೆ ಇದೆ, ಕುಡಿಯುವ ನೀರಿನ ಘಟಕದ ಶುಚಿತ್ವಕ್ಕೆ ಮಹತ್ವ ಕೊಡಿ, ಎಂಬುದಾಗಿ ಹಾಗೂ ಕೆಲವರು ಪ್ರಸ್ತುತ ಕುಡಿಯುವ ನೀರಿನ ವ್ಯವಸ್ಥೆ ಚೆನ್ನಾಗಿದೆ ಎಂದು ತಿಳಿಸಿರುತ್ತಾರೆ.<br>ಹಿಂದೆ ಲಾಲ್ ಬಾಗ್ ನಲ್ಲಿ ಒಟ್ಟು 3 ಕುಡಿಯುವ ಘಟಕಗಳಿದ್ದು, 2019 ರಲ್ಲಿ ಹೆಚ್ಚುವರಿಯಾಗಿ 7 ಕುಡಿಯುವ ನೀರಿನ ಘಟಕಗಳನ್ನು ನಿರ್ಮಿಸಲಾಗಿದೆ. ಪ್ರಸ್ತುತ ಒಟ್ಟಾರೆ 10 ಕುಡಿಯುವ ನೀರಿನ ಗಟಕಗಳಿದ್ದು, ಹಾಲಿ ನೀರಿನ ಘಟಕಗಳ ಸ್ವಚ್ಚತೆ ಮತ್ತು ಹೆಚ್ಚುವರಿ ನೀರಿನ ಘಟಕಗಳ ಸ್ಥಾಪನೆಗೆ ಒತ್ತು ನೀಡಲಾಗುವುದು. |

ಲಾಲ್ ಬಾಗ್ ನಿರ್ವಹಣೆಯ ಬಗ್ಗೆಯೂ ಹಲವಾರು ಉತ್ತಮ ಪ್ರಶಂಸೆಗಳು ಸಹ ವ್ಯಕ್ತವಾಗಿರುತ್ತವೆ.